
ಅಪರಂಜಿ

ಸಂಪುಟ–೫
ಸಂಚಿಕೆ–೯
ಡಿಸೆಂಬರ್ 1987

ತಿಳಿನಗೆಯ ಕಾರಂಜ



ಬಿಡಿಪತ್ರಿಕೆ : ಕೇವಲ ಒಂದೂವರೆ ರೂಪಾಯಿ



(ಹಾಸ್ಯ ನಗೆಯ ಕಾರಂಜಿ)

ಸಂಪುಟ ೫ ಡಿಸೆಂಬರ್ 1987 ಸಂಚಿಕೆ ೩

ಬಿಡಿ ಪ್ರತಿ : ಕೇವಲ ಒಂದೂವರೆ ರೂಪಾಯಿ

ವಾರ್ಷಿಕ ಚಂದಾ : 15 ರೂ.

ಆಜೀವ ಚಂದಾ : 150 ರೂ.

ಪೋಷಕರು : 500 ರೂ.

ಶಿವಕುಮಾರ್

ಸಂಪಾದಕ

ಗೌರವ ಸಲಹೆಗಾರರು

ಶ್ರೀ ಅ.ರಾ.ಸೇ.

ಶ್ರೀ ಶೇಷಗಿರಿ

ಅಪರಂಜಿ ಕಾರ್ಯಾಲಯ :

119 [ಹಳೆಯ 36], 6ನೆ ಮುಖ್ಯ ರಸ್ತೆ

ಮಲ್ಲೇಶ್ವರಂ, ಬೆಂಗಳೂರು 560003

ಈ ಸಂಚಿಕೆಯಲ್ಲಿ......

ವ್ಯಂಗ್ಯ ಚಿತ್ರಗಳು : ಅಶ್ವಥ್

ಮುದ್ರಣ : ಇಂಪ್ರೆಷನ್ಸ್, ಬೆಂಗಳೂರು–3 ದೂರವಾಣಿ : 362989, 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೫ ಡಿಸೆಂಬರ್–1987 ಸಂಚಿಕೆ–೩

ಆಗ ಈ ಜಗತ್ತು ಅವ್ಯಾಕೃತವಾಗಿತ್ತು

—ಬೃಹದಾರಣ್ಯಕ

ಹುಟ್ಟು ಸಾವುಗಳಿಗೆ ಕರ್ಮವೇ ಬೀಜವಂತೆ, ಅವಿದ್ಯೆಯೇ ಕ್ಷೇತ್ರವಂತೆ. ಈ ಜಗತ್ತು ಹೀಗಾಗುವಮುಂಚೆ ಬಿಡಿ ಬಿಡಿಯಾಗಿರಲಿಲ್ಲವಂತೆ. ಮಡಕೆಯಾಗುವ ಮೊದಲು ಮಣ್ಣು ಇದ್ದಂತೆ, ಇದು ಬ್ರಹ್ಮವೇ ಆಗಿತ್ತಂತೆ.

ಹಾಗೆಯೇ ನಮ್ಮ ನಾಡೂ, ಸ್ವತಂತ್ರವಾಗಿ ಪಾರ್ಟಿಗಳು ಹುಟ್ಟುವ ಮೊದಲು ಒಂದೇ ಆಗಿತ್ತು. ನಂತರ ಅಧಿಕಾರಕ್ಕಾಗಿ ಬೇರೆ ಬೇರಾಯಿತು. ಓಟಿಗಾಗಿ ಒಡೆದು ಛಿದ್ರವಾಗಿ ಏನನ್ನು ಹೇಳಲೂ ಸಿದ್ಧವಾಯಿತು. ಓಟುಕೊಟ್ಟಹೆರರೂ ತಮ್ಮವರೇ. ಓಟು ಸಿಗುವುದಕ್ಕಾಗಿ ಯಾರು ಮಾಡಿದ ಏನನ್ನಾದರೂ ಸಮರ್ಥಿಸುವುದೇ. ಅಧಿಕಾರ ಸಿಕ್ಕಮೇಲೆ ಹೇಳಿದ್ದೇ ಸರಿ.

ಕ್ರಿಕೆಟ್ಟಿನಲ್ಲೂ ಅಷ್ಟೇ, ಮೋಘವಾದ ಆಶೆ, ಮೋಘವಾದ ಕರ್ಮ, ತನಗಲ್ಲದುದಂ ತನಗವ್ಪುದೆಂಪು ಬಗೆದರೆ, 'ದಾರುಣ ದುಃಖಮನೈದದಿರ್ಕುಮೇ ?' ಟೀಮಿನಲ್ಲಿ ಕರ್ಣಾಟಕದ ಒಬ್ಬನೂ ಬೇಡವೇ ?

ಆದುದರಿಂದ ಏನು ! ಈಗಿದೆಯಲ್ಲಾ ಇದೇ ಸ್ವಾತಂತ್ರ್ಯದ ಫಲ, ಪ್ರಗತಿ !

ಇನ್ನೇನು ಎಂದು ತಿಳಿದುಕೊಂಡಿದ್ದಿರಿ !

ಅಪರಂಜಿ ಕಿಡಿ

—ಆನಂದ್

ಬರ — ಭಾರತಕ್ಕೆ ವಿಶ್ವಬ್ಯಾಂಕ್‌ನ ಭಾರಿ ನೆರವು.

—ಶೀರ್ಷಿಕೆ

ನೆರವು ಕೊಟ್ಟಷ್ಟೂ ಜನ ಬರ–ಬಾರದೇ ಎನ್ನುತ್ತಾರೋ ?

* * * *

ಸರ್ಕಾರ ಯಾವಾಗಲೂ ಸುಗ್ರೀವಾಜ್ಞೆ ಹೊರಡಿಸುತ್ತಲ್ಲ, ಆದರ ರಾಮ ಯಾರು ? ಅಂತ ಓದುಗರ ಸಂಶಯ !

ರಾಮ ರಾಮ, ಎಂಥ ಪ್ರಶ್ನೆ ?

* * * *

ಅಷ್ಟ ದಿಕ್ಪಾಲಕರು ಯಾರು ಅಂತ ಸ್ಕೂಲ್ ಹುಡುಗನ್ನ ಕೇಳಿದರೆ, ರಿಲಯೆನ್ಸ್ ಕಪ್ ಟೀಮುಗಳ ಕ್ಯಾಪ್ಟನ್‌ಗಳು ಸಾರ್ ಅನ್ನೋದೆ ?

* * * *

ಹೊಸ ವೈದ್ಯ ಕಾಲೇಜಿಗೆ ಹೆಗಡೆ ಭರವಸೆ : ಸೂಕ್ತ ಸಿದ್ಧತೆ ಮಾಡಿಕೊಂಡರೆ ಫಾರ್ಮಸಿ, ನರ್ಸಿಂಗ್ ಕಾಲೇಜು.

—ಸುದ್ದಿ

ಸೂಕ್ತ ಸಿದ್ಧತೆ ಅಂದರೆ ಏನು ?

* * * *

ಕ. ಸಾ. ಪರಿಷತ್ತು ಸರ್ಕಾರದ ಅಧೀನಕ್ಕೆ.

—ಸುದ್ದಿ

ಈಗಲಾದರೂ ಅಲ್ಲಿಯ ವಾತಾವರಣ ಶುಚಿಯಾಗಲಿ ಅಂತ ಅಪರಂಜಿ ನಕ್ಕಳಂತೆ !

* * * *

ತೆರಿಗೆ ಬಾಕಿಯಲ್ಲಿ ರೋಜರ್ ಬಿನ್ನಿಗೆ ಅಗ್ರ ಸ್ಥಾನ.

—ಪತ್ರಿಕೆ

ಲೆಕ್ಕಕ್ಕುಂಟು, ಆಟಕ್ಕಿಲ್ಲ !

* * * *

ಸೈದ್ಧಾಂತಿಕವಾಗಿ ಎಡ ಮತ್ತು ಬಲ ಪಂಥಗಳ ನಡುವೆ ಅಂಥ ವ್ಯತ್ಯಾಸವಿದೆಯೆಂದು ನನಗನ್ನಿಸುವುದಿಲ್ಲ.

—ಶ್ರೀ ರಾ. ಹೆಗಡೆ

ಈ ಹೇಳಿಕೆ ರೇಗನ್ ಮತ್ತು ಗೋರ್ಬಚೆವ್ ಅವರ ಕಿವಿಗಾದರೂ ಬಿದ್ದರೆ ಉತ್ತಮವೇನೋ ?

* * * *

ನಾನು ನಡೆಯುವುದು, ನುಡಿಯುವುದು ನನ್ನ ಸಿತಾರ್‌ನಿಂದ.

—ಶ್ರೀ ರವಿಶಂಕರ್

ನಂ ಪಕ್ಕದ ಮನೇಲಿ ಪಿಟೀಲು ಕಲಿಯುತ್ತಿರುವ ಸೀತಾಲಕ್ಷ್ಮಿಗೆ ಈ ಮಾತು ತಿಳಿಸಬೇಕು !

ಇಂಥ ಪ್ರಟ್ಟವ್ಯಾಜ್ಯವನ್ನು ನೀವು ನೀವೇ ತೀರ್ಮಾನಿಸಿಕೊಳ್ಳ ಬಾರದಿತ್ತೇನ್ರೈಯ್ಯಾ ಎಂದು ಜಡ್ಜಿಗಳು ಕೇಳಿದಾಗ, ಅಪರಾಧಿಯೊಬ್ಬ ಅಂದನಂತೆ "ನಾನು ತೀರ್ಮಾನಿಸಿಬಿಡ್ತಾ ಇದ್ದೆ, ಆದರೆ ಅಷ್ಟರಲೇ ಪೋಲೀಸಿನವರು ಬಂದರು, ನಮ್ಮನ್ನು ಬಿಡಿಸಿ ಇಲ್ಲಿಗೆ ಎಳ್ಕೊಂಡುತಂದರು ಮಾಸ್ವಾಮಿ"

—ಧಳಕು-ಶುಣುಕು

6

ಜಯ ಸ್ಕೂಟರಲ್ಲಿ ಬಿದ್ದಿದ್ದು

—ಡಾ॥ ಹೊ. ಶ್ರೀನಿವಾಸಯ್ಯ

ಸುಮಾರು 20 ವರ್ಷಗಳ ಹಿಂದಿನ ಮಾತು. ನಾನು ಲ್ಯಾಂಬಿ ಸ್ಕೂಟರ್ ಇಟ್ಟಿದ್ದೆ. ಎಲ್ಲಿಗಾದರೂ ಹೋಗಬೇಕಾದರೆ ನನ್ನ ಮತ್ತು ಪತ್ನಿ ಜಯಲಕ್ಷ್ಮಿಯ ಪ್ರಯಾಣ ಸ್ಕೂಟರಲ್ಲಿಯೇ. ನಡೆಯುತ್ತಿದ್ದವನಿಗೆ ಸೈಕಲ್ ಸವಾರಿಯೇ ದೊಡ್ಡ ವಾಹನ. ಸೈಕಲ್ ತುಳಿಯುತ್ತಿದ್ದವನಿಗೆ ಸ್ಕೂಟರ್ ಕೊಂಡರೆ ಅದೇ ಬಹಳ ದೊಡ್ಡದು. ನಾನು ಕಾರು ಕೊಳ್ಳುವ ಮೊದಲಿಗೆ ಸ್ಕೂಟರೇ ದೊಡ್ಡ ವಾಹನ. ಅದನ್ನು ನೋಡಿವಾಗಲೆಲ್ಲ ಹೆಮ್ಮೆ. ಸ್ಕೂಟರ್ ಇಲ್ಲದೆ ಇರುವವರನ್ನ ನೋಡಿ, ಎಲ್ಲರೂ ನನ್ನ ಸ್ಕೂಟರನ್ನೇ ನೋಡುತ್ತಾರೆ ಅಂತ. ಸ್ಕೂಟರ್ ಮೇಲೆ ಹೋಗುತ್ತಿದ್ದರೆ ಬಲು ಠೀವಿ. ತಲೆ ಎತ್ತಿ ಜೋರಾಗಿ ಹೋಗುವುದು.

ಸ್ಕೂಟರ್ ಹಿಂದೆ ಪತ್ನಿಯನ್ನು ಕುಳ್ಳಿರಿಸಿಕೊಂಡು ಹೊರಟರೆ ಇನ್ನೂ ಸ್ವಲ್ಪ ಜಂಭ; ಹೆಂಗಸರೆಲ್ಲಾ ನೋಡುತ್ತಾರೆ ಅಂತ. ಒಂದು ಸಾರಿ ನನ್ನ ಪತ್ನಿ ರಾಜಾಜಿ ನಗರದಲ್ಲಿರುವ ಅವಳ ತಮ್ಮನ ಮನೆಗೆ ಹೋಗಬೇಕು ಅಂದಳು. ಸರಿ, ಸ್ಕೂಟರ್ ಸ್ಟಾರ್ಟ್ ಮಾಡಿ ಕುಳಿತುಕೊಳ್ಳಲು ಹೇಳಿದೆ. ಹಿಂದುಗಡೆ ಕುಳಿತಳು. ಸ್ವಲ್ಪ ಮುಂದೆ ಹೋದೆ. ಇಂಜಿನ್ ನಿಂತು ಹೋಯಿತು. ಮತ್ತೆ ಸ್ಟಾರ್ಟ್ ಮಾಡಿ ಕುಳಿತುಕೋ ಅಂತ ಹೇಳಿ ಸ್ಕೂಟರ್ ನಡೆಸಿಕೊಂಡು ಹೊರಟೆ. ರಸ್ತೆ ಉದ್ದಕ್ಕೂ ವಾಹನಗಳ ಕಾಟ. ಅಳ್ಳಾಡಿಸದೆ. ಹೆಚ್ಚು ಮಾತನಾಡದೆ ನಿಗಾ ಇಟ್ಟು ಸ್ಕೂಟರ್ ಓಡಿಸಬೇಕು. ನಮಗೆ ಇಷ್ಟವಿಲ್ಲದಿದ್ದರೂ ಬೇರೆಯವರು ಬಂದು ಡಿಕ್ಕಿ ಹೊಡೆಯುವುದು ಜಾಸ್ತಿ. ನಮ್ಮ ದೃಷ್ಟಿ, ಮನಸ್ಸು ಎಲ್ಲಾ ಆ ಕಡೆಗೆ.

ರಾಜಾಜಿನಗರದ ಹತ್ತಿರ ಹೋದಾಗ, ಮುಖ್ಯ ರಸ್ತೆಗೆ ಸ್ಕೂಟರ್ ತಿರುಗಿಸಿದೆ. ಒಂದು ಲಾರಿ ಅಡ್ಡ ಬಂತು. ಗಾಡಿ ನಿಲ್ಲಿಸಿದೆ. ಇಂಜಿನ್ ನಿಂತು ಹೋಯಿತು. ಪತ್ನಿ ಜಯಲಕ್ಷ್ಮಿಯನ್ನು "ಇಳಿ, ಇಂಜಿನ್ ನಿಂತಿದೆ'' ಅಂತ ಹೇಳಿ ನಾನು ಇಳಿದೆ. ನೋಡುತ್ತೀನಿ, ಜಯ ಇಲ್ಲ. ಗಾಬರಿಯಾಯ್ತು. ಸುತ್ತಮುತ್ತ ನೋಡಿದೆ. ಎಲ್ಲಿಯೂ ಕಾಣಲಿಲ್ಲ. ಮೈ ಎಲ್ಲಾ ಬೆವರಿತು. ಏನು ಮಾಡಬೇಕೋ ತಿಳಿಯಲಿಲ್ಲ. ಮಧ್ಯೆ ಎಲ್ಲಾದರೂ ಬಿದ್ದಿರಬೇಕು. ನಾನು ಎಚ್ಚರಿಕೆ ವಹಿಸಲಿಲ್ಲ ಅಂದುಕೊಂಡು ಸ್ಕೂಟರನ್ನು ಹಿಂತಿರುಗಿಸಿ, ದಾರಿಯುದ್ದಕ್ಕೂ ಹುಡುಕಿಕೊಂಡು ಬಂದೆ. ನಾಲ್ಕು ಜನ ನಿಂತ

ಕಡೆ ಕಣ್ಣಾಡಿಸಿದೆ. ಎಲ್ಲಾದರೂ ಜಯ ಬಿದ್ದು, ಶುಶ್ರೂಷೆ ಮಾಡುತ್ತಿರುವರೇ ಅಂತ. ದಾರಿಯುದ್ದಕ್ಕೂ ಇರುವ ಕ್ಲಿನಿಕ್ ನೋಡಿದೆ. ಜಯ ಕಾಣಲಿಲ್ಲ. ಮತ್ತಷ್ಟು ಗಾಬರಿಯಾಯ್ತು. ಮಲ್ಲೇಶ್ವರದ ಆಸ್ಪತ್ರೆಗೇನಾದರೂ ಕರೆದುಕೊಂಡು ಹೋಗಿರಬೇಕು ಅಂತ, ಅಲ್ಲಿಗೂ ಹೋದೆ. ಆಸ್ಪತ್ರೆಯಲ್ಲಿ ಎಲ್ಲಾ ಕೊಠಡಿಗಳನ್ನೂ, ವಾರ್ಡ್‌ಗಳನ್ನೂ ನೋಡಿದೆ. ಕಾಣಲಿಲ್ಲ. ಸ್ವಾಗತಕಾರನನ್ನ ವಿಚಾರಿಸಿದೆ. ಈಗ ಯಾವುದಾದರೂ ಅಪಘಾತದ ಕೇಸ್ ಬಂದಿರುವುದೇ ಅಂತ.

ಆತ ನನ್ನನ್ನೇ ಪ್ರಶ್ನಿಸಿದ. "ನೀವು ಯಾರು? ಅಪಘಾತ ಮಾಡಿರುವಿರಾ? ಯಾರಿಗೆ ಅಪಘಾತವಾಯಿತು?" ವಿವರ ಕೇಳಿದ. ನನಗೆ ಏನೂ ತೋಚಲಿಲ್ಲ.

"ನಮ್ಮ ನೆಂಟರು ಒಬ್ಬರಿಗೆ ಅಪಘಾತವಾಗಿದೆ. ಇಲ್ಲಿಗೆ ಬಂದಿರುವರೇ ಎಂದು ನೋಡಲು ಬಂದೆ" ಎಂದು ಹೇಳಿದಾಗ, ''ಅಲ್ಲಿ ಡಾಕ್ಟರ್ ಇದ್ದಾರೆ. ವಿಚಾರಿಸಿ" ಎಂದ.

ಡಾಕ್ಟರನ್ನು ಕೇಳಿದರೆ ಇನ್ನೇನಾದರೂ ಆದೀತು ಅಂದುಕೊಂಡು ಅವರ ಬಳಿಗೆ ಹೋಗದೆ ಮತ್ತೊಂದು ಸಾರಿ ಎಲ್ಲಾ ಸ್ಥಳದಲ್ಲಿ ನೋಡಿ ಸೀದಾ ಮನೆಗೆ ಬಂದೆ.

ಮನೇಲಿ ನಮ್ಮ ತಾಯಿಯವರನ್ನ ಕೇಳಿದ್ರೆ ಜಯ ಬರಲಿಲ್ಲವೆ ಅಂತ.

"ನಿನ್ನ ಜೊತೇಲಿ ಸ್ಕೂಟರಲ್ಲಿ ಹೋದಳಲ್ಲಾ. ಎಲ್ಲಿ ಬಿಟ್ಟು ಬಂದೆ?" ಅಂದರು.

ನನ್ನ ಜೊತೆ ಸ್ಕೂಟರಲ್ಲಿ ಬಂದಿರುವುದು ಖಾತರಿಯಾಯ್ತು.

ಮತ್ತೊಂದು ಸಾರಿ ಹೋದ ದಾರಿಯಲ್ಲೇ ಹುಡುಕಿಕೊಂಡು ಹೊರಟೆ. ಮೈ ಎಲ್ಲಾ ಬೆವರುತ್ತಿದೆ. ಏನು ಮಾಡಲೂ ತಿಳಿಯದು. ಎಲ್ಲಿ ಬಿದ್ದಿರುವಳೋ, ಯಾವ ಆಸ್ಪತ್ರೆಗೆ ಕರೆದುಕೊಂಡು ಹೋದರೋ ಎಂಬ ದಿಗಿಲು. ದಾರಿಯುದ್ದಕ್ಕೂ ನೋಡಿಕೊಂಡು ಹೋದೆ. ಎಲ್ಲಿಯೂ ಕಾಣಲಿಲ್ಲ. ನೇರವಾಗಿ ನನ್ನ ಭಾವಮೈದುನನ ಮನೆಗೆ ಹೋದೆ. ನಮ್ಮ ಮಾವನವರು ಬಾಗಿಲಲ್ಲೇ ನಿಂತಿದ್ದರು. ಸ್ಕೂಟರ್ ನಿಲ್ಲಿಸಿ ಜಯ ಬಂದಳೇ ಅಂತ ಕೇಳಿದೆ. ಬಂದಿಲ್ಲವಲ್ಲಾ. ಇಲ್ಲಿಗೆ ಬರುತ್ತೀನಿ ಅಂತ ಹೊರಟಳೇನು ?' ಅಂದರು.

ನನಗೆ ಏನು ಹೇಳಬೇಕೋ ತೋಚಲಿಲ್ಲ. ಇಲ್ಲಿಗೂ ಬಂದಿಲ್ಲ. ನಮ್ಮ ಮನೇಲೂ ಇಲ್ಲ. ದಾರಿಯಲ್ಲೂ ಇಲ್ಲ. ಯಾವುದೋ ಆಸ್ಪತ್ರೆ ಸೇರಿರಬೇಕು ಅಂದು ಕೊಂಡು ಪುನಃ ಬರುತ್ತೇನೆ ಅಂತ ಮಾವನವರಿಗೆ ಹೇಳಿ, ಸ್ಕೂಟರ್ ನಡೆಸುವುದಕ್ಕೆ ಕೈಕಾಲು ನಡುಗುತ್ತಿದ್ದರೂ ಹೇಗೋ ಹೊರಟೆ. ಮನಸ್ಸಿನಲ್ಲಿ ಏನೇನೋ ಚಿಂತೆ. ಗಾಬರಿ.

ಭಾಷ್ಯಂ ವೃತ್ತದವರೆಗೆ ಬಂದೆ. ಸ್ಕೂಟರ್ ನಿಲ್ಲಿಸಿ ಕರವಸ್ತ್ರದಲ್ಲಿ ಬೆವರು ಒರೆಸಿ ಕೊಂಡೆ. ತಲೆ ಎತ್ತಿ ನೋಡಿದಾಗ ಜಯ ಕೈಯಲ್ಲಿ ಬ್ಯಾಗ್ ಹಿಡಿದುಕೊಂಡು ಕಾಲುದಾರೀಲಿ ಬರುತ್ತಿದ್ದಳು. ಕನಸೋ ನನಸೋ ಅಂದುಕೊಂಡು ಸ್ವಲ್ಪ ಹೊತ್ತು ನಿಂತೆ.

ನಿಜವಾಗಿಯೂ ಜಯಳೇ.

ಹತ್ತಿರ ಬಂದಳು. ಗಾಬರಿಯಿಂದ ಕೇಳಿದೆ.

"ಸ್ಕೂಟರ್‌ನಿಂದ ಎಲ್ಲಿ ಬಿದ್ದೆ? ಕೈಕಾಲಿಗೇನಾದರೂ ಪೆಟ್ಟಾಯಿತೇ? ಹೇಗೆ ಬಂದೆ?"

ಅವಳ ನಗು ಮುಖ ನೋಡಿ ಏಟು ಬಿದ್ದಿಲ್ಲವೆಂದು ಖಾತರಿ. ಮತ್ತೆ ಪ್ರಶ್ನಿಸಿದೆ.

ಜಯ ನಕ್ಕು ಹೇಳಿದಳು. "ಮನೆಯ ಹತ್ತಿರವೇ, ನಾನು ಸ್ಕೂಟರ್ ಹತ್ತುವ ಹೊತ್ತಿಗೆ, ನೀವು ಸ್ಕೂಟರ್ ನಡೆಸಿಕೊಂಡು ಹೊರಟಿರಿ. ಹಿಂತಿರುಗಿ ಬರುತ್ತಾರೆ ಅಂತ ನೋಡಿದೆ. ನೀವು ಬರಲೇ ಇಲ್ಲ. ಅದಕ್ಕೆ ಬಸ್ಸಿನಲ್ಲಿ ಭಾಷ್ಯಂ ವೃತ್ತದವರೆಗೆ ಬಂದೆ. ಅಲ್ಲಿಂದ ಹೋಗೋಣ ಅಂತ".

ಸರಿ. ನೀವೆಲ್ಲಿ ಹೋಗಿದ್ದಿರಿ ಎಂದು ಪ್ರಶ್ನಿಸಿದಳು.

ನಡೆದ ಕತೆಯನ್ನು ವಿವರಿಸಿ, ಹೋಟೆಲಿನಲ್ಲಿ ಕಾಫಿ ಕುಡಿದು, ಸುಧಾರಿಸಿ ಕೊಂಡು ಸ್ಕೂಟರ್ ಮೇಲೆ ಕೂರಿಸಿಕೊಂಡು, ಕುಳಿತಿದ್ದೇನೆ ಅಂತ ಜಯ ಹೇಳಿದ ಮೇಲೆ ನಡೆಸಿಕೊಂಡು ಆಕೆಯ ತಮ್ಮನ ಮನೆಗೆ ಹೋದೆ.

9

ಅಲೆಕ್ಸಿ ಲೂಸಾನ್

—ಶಿವು

"ಇಬ್ಬರು ಆಟ ಆಡುತ್ತಿದ್ದರೆ, ಮಿಕ್ಕ ಹನ್ನೊಂದು ಜನ ಅವರನ್ನ ನೋಡ್ತಾ ನಿಂತಿರ್ತಾರ. ನಿಜಕ್ಕೂ ಕ್ರಿಕೆಟ್ ನಿಮ್ಮ ದೇಶಕ್ಕೆ ಅನುರೂಪವಾಗಿದೆ!" ಇದು ಅಲೆಕ್ಸಿ ಲೂಸಾನನ ಅನಿಸಿಕೆ.

ನಾನು ಅಲೆಕ್ಸಿಯನ್ನು ಭೆಟ್ಟಿಯಾದದ್ದು ಹುಬ್ಬಳ್ಳಿಯಲ್ಲಿ. ಅಲ್ಲಿನ ಆಟದ ಮೈದಾನದಲ್ಲಿ ಬೆಳಗಾಗೆದ್ದು ಅವನ ಜಾಗಿಂಗ್. ಅದನ್ನು ನೋಡುವುದಕ್ಕೇ ಒಂದು ಹುಡುಗರ ದಂಡು.

ಅಲೆಕ್ಸಿ ರಷ್ಯಾದವ. ಅವನ ಪೂರ್ವಜರು ಸೈಬೀರಿಯಾದವರಂತೆ. ಲೂಸಾನ್ ಅಲ್ಲಿನ ಒಂದು ನದಿ. ನದಿಯ ಹೆಸರೇ ಮನೆತನಕ್ಕೆ ಅಂಟಿಕೊಂಡಿತ್ತು.

"ಸೈಬೀರಿಯಾಕ್ಕೆ ಹೋಗಬೇಕು ಅಂತ home-sick ಆಗೋಲ್ಲವೇ ಅಲೆಕ್ಸಿ?" ನಾನು ಬೇಕೆಂದೇ ಕೆಣಕಿದೆ.

"ಯಾಕೆ ಹೇಳುತ್ತೀ ಮಹರಾಯ. Home-sickness ಎಷ್ಟು ತೀವ್ರ ಅಂದರೆ ನಾನು ಅಲ್ಲಿಗೆ ಹೋಗೋ ರಭಸಕ್ಕೆ ಸೈಬೀರಿಯಾನೂ ದಾಟಿ ಮುಂದೆ ಹೋಗಿ ಬಿಡ್ತೀನಿ!" ಅಂದ. ಸೈಬೀರಿಯಾ ದಾಟಿ ಮುಂದೆ ಹೋದರೆ ಅಮೆರಿಕಾ ಸಿಗುತ್ತೆ ಅಂತ ಆಮೇಲೆ ತಿಳಿಯಿತು.

ಅವನ ಶೈಲಿಯೇ ಹಾಗೆ. ಮಾತಿಗೆ ಮಾತು ಜೋಡಿಸುವುದರಲ್ಲಿ ಎತ್ತಿದ ಕೈ. ರಷ್ಯಾದವನಾದರೂ, ವಾಸ ಜಿನೀವಾದಲ್ಲಿ. I. L. O.ದಲ್ಲಿ ಕೆಲಸ. ಕೆಲಸದ ಸಲುವಾಗಿ ಭಾರತಕ್ಕೆ–ಹುಬ್ಬಳ್ಳಿಗೆ ಭೇಟಿ.

ರಷ್ಯನರ ಕುಡಿತದ ಚಟದ ಬಗ್ಗೆ ಮಾತು ಹೊರಳಿತು. ರಷ್ಯಾದಲ್ಲಿ ಮಕ್ಕಳಿಗೂ ಮದ್ಯ ಸೇವನೆ ಅಂತ ಯಾರೋ ಹೇಳಿದರು.

ಅಲೆಕ್ಸಿಯ ಪ್ರತಿಕ್ರಿಯೆ ಥಟ್ಟನೆ ಬಂತು.

"ನನ್ನ ಮಗಳು (ಹತ್ತು ವರುಷದ ನಟಾಷಾ) ಮದ್ಯ ಸೇವನೆ ಮಾಡಿ ನಾನು ಜೈಲಿಗೆ ಹೋಗೋದನ್ನ ತಪ್ಪಿಸಿದಳು" ಅಂತ ಉದ್ಗರಿಸಿದ.

"ಅದು ಹೇಗೆ ?" ನಮ್ಮೆಲ್ಲರ ಪ್ರಶ್ನೆ.

"ನೋಡಿ, ಜಿನೀವಾದಲ್ಲಿ **drunken driving** ಮಾಡಿದರೆ ಅತಿ ಉಗ್ರ ಶಿಕ್ಷೆ. ಒಮ್ಮೆ ನಾನು, ನನ್ನ ಪತ್ನಿ ಹಾಗೂ ಮಗಳು ಒಂದು ಪಾರ್ಟಿ ಮುಗಿಸಿಕೊಂಡು ರಾತ್ರಿ ಹನ್ನೊಂದು ಘಂಟೆ ಸಮಯದಲ್ಲಿ ಮನೆಗೆ ಹೊರಟಿದ್ದೆವು. ನಾನು, ನನ್ನ ಪತ್ನಿ ತಕ್ಕಮಟ್ಟಿಗೆ ಕುಡಿದಿದ್ದೆವು ಅನ್ನಿ. ಮಗು ಸಹಾ ತನ್ನ ಶಕ್ತ್ಯಾನುಸಾರ ಕುಡಿದಿತ್ತು. ಎಲ್ಲಿಂದಲೋ ಪ್ರತ್ಯಕ್ಷ ಆದ ನೋಡಿ ಪೋಲೀಸ್, ಮೋಟಾರ್ ಸೈಕಲ್ ಮೇಲೆ. ಸರಿ, ಅವನ ಆಜ್ಞೆಯಂತೆ ಕಾರನ್ನು ನಿಲ್ಲಿಸಿದೆವು. ಒಂದು ಪರೀಕ್ಷಾ ಸಾಧನ ತೆಗೆದು ಅದರಲ್ಲಿ ಊದು ಅಂದ. ಸಾಧನ ಒಂದು ಗಾಜಿನ ಬುರುಡೆ. ಯಾವುದೋ ರಾಸಾಯನಿಕ ದ್ರವ ಇರುತ್ತೆ ಅದರಲ್ಲಿ. ನಮ್ಮ ಉಸಿರಿನಲ್ಲಿ ಆಲ್ಕೋಹಾಲ್ ಇದ್ದರೆ ಅದರ ಬಣ್ಣ ಬದಲಾಗುತ್ತೆ. ಊದಿದೆ. ಬಣ್ಣ ಬದಲಾಯಿತು. ಪೋಲೀಸನ ಮುಖದ ಮೇಲೆ ವಿಜಯೋನ್ಮತ್ತ ನಗೆ. ನಾನು ಪ್ರತಿಭಟಿಸಿದೆ.

'ನಾನೇನೂ ಕುಡಿದಿಲ್ಲಾರೀ. ನಿಮ್ಮ ಸಾಧನದ್ದೇ ತಪ್ಪಿರಬೇಕು. ಬೇಕಾದ್ರೆ ನನ್ನ ಪತ್ನಿಯನ್ನೂ ಪರೀಕ್ಷೆಗೆ ಒಳಪಡಿಸಿ. ಅವಳೇನೂ ಕುಡಿದಿಲ್ಲ' ಅಂತ ದಬಾಯಿಸಿದೆ.

ಅವ 'ಸರಿ, ಪರೀಕ್ಷಿಸೋಣ' ಅಂತ ನನ್ನ ಪತ್ನಿಗೆ ಇನ್ನೊಂದು ಬುರುಡೆಯಲ್ಲಿ ಊದಲು ಹೇಳಿದ. ಗೊತ್ತಿದ್ದಂತೆ ಅದರ ಬಣ್ಣವೂ ಬದಲಾಯಿತು.

'ನೋಡಿದ್ರಾ, ನಿಮ್ಮ ಸಾಧನದ್ದೇ ತಪ್ಪು' ಅಂತ ಹೇಳಿ ನುಣಿಚಿಕೊಳ್ಳಲು ನೋಡಿದೆ.

"ನಿಮ್ಮ ಪತ್ನೀನೂ ಕುಡಿದಿರಬಹುದು. ನಿಮ್ಮ ಆಟ ಎಲ್ಲಾ ಇಲ್ಲಿ ನಡೆಯೋಲ್ಲ" ಅಂತ ಹೇಳಿ ಪೋಲೀಸ್ ಕೇಸ್ ಬುಕ್ ಮಾಡಲು ಉದ್ಯುಕ್ತನಾದ. ಕಡೇ ಪ್ರಯತ್ನ ಮಾಡಿ ಬಿಡೋಣ ಅಂತ "ನೋಡ್ರಿ, ನಾವು ಕುಡಿದಿಲ್ಲ ಅಂದ್ರೆ ನೀವು ನಂಬೋದಿಲ್ಲ. ಒಂದು ಕೆಲಸ ಮಾಡೋಣ. ನನ್ನ ಹತ್ತು ವರುಷದ ಮಗು ಹಿಂದೆ ಕೂತಿದೆ. ಅದರ ಕೈಲೂ ಊದಿಸಿ ಬಣ್ಣ ಸರಿಯಾಗಿದ್ರೆ, ನೀವೇ ಸರಿ ಅಂತ ಒಪ್ಕೋತೀನಿ" ಅಂತ ಅಮಾಯಕ ನಂತೆ ಸಲಹೆ ಮಾಡಿದೆ.

ಆತ ಸುಲಭವಾಗಿ ಒಪ್ಪಿದ. ಹಿಂದಿನ ಬಾಗಿಲು ತೆಗೆದು ನಟಪಾಳಿಗೆ ಊದಲು ಹೇಳಿದ. ದ್ರವದ ಬಣ್ಣ ಥಟ್ಟನೆ ಬದಲಾಯಿತು. ಪೋಲೀಸರಿಗೆ ಮಾತೇ ಹೊರಡಲಿಲ್ಲ. ಅವರ ದೇಶದಲ್ಲಿ ಹತ್ತು ವರುಷದ ಮಕ್ಕಳು ಕುಡಿಯುವುದನ್ನು ಕನಸಿನಲ್ಲಿಯೂ ನಂಬುವುದಿಲ್ಲ.

'ಸರಿ, ಹೋಗಿ, ನಮ್ಮ ಸಾಧನದಲ್ಲೇ ಏನೋ ತಪ್ಪಿರಬೇಕು' ಅಂತ ಹೇಳಿ ನಮ್ಮನ್ನು ಮುಂದೆ ಹೋಗಲು ಬಿಟ್ಟ.

"ನಿಜವಾಗಿಯೂ ನಡೆದದ್ದೇ ಇದು ?'' ಅಂತ ಯಾರೋ ಕೇಳಿದರು.

"ಖಂಡಿತಾರೀ. ನಮ್ಮ ದೇಶದಲ್ಲಿ ದೇವರಿಲ್ಲ. ಇಲ್ಲದಿದ್ದರೆ ದೇವರಾಣೆ ಅಂತ ಹೇಳುತ್ತಿದ್ದೆ. ಈಗ ಈ ಕೈಲಿರೋ ವ್ಹಿಸ್ಕಿ ಆಣೆಗೂ ನಿಜ'' ಅಂದ.

"ಇಂಡಿಯನ್ ವ್ಹಿಸ್ಕಿ ಮೇಲೆ ಆಣೆ ಮಾಡಿದರೆ ಅದಕ್ಕೆ ಬೆಲೆ ಇದೆಯೇ ?'' ಅಂತ ನಾನು ಮೆಲ್ಲಗೆ ಕೇಳಿದೆ.

"ಖಂಡಿತಾ ಇಲ್ಲ. ನಾವೆಲ್ಲಾ ವೋಡ್ಕಾ ಮೇಲಿನ ಆಣೆ ಮಾತ್ರ ಸೀರಿಯ ಸ್ಸಾಗಿ ತಗೋತೇವೆ !'' ಅಂತ ಪಿಸುಗುಟ್ಟಿ ವಿಂಕ್ ಮಾಡಿದ.

ಅಲೆಕ್ಸಿಯ ನೆನಪಿನ ಬುಟ್ಟಿಯಲ್ಲಿ ಅದೆಷ್ಟು ಕಥೆಗಳು !

ಅಂದು ನಮ್ಮ ಗುಂಪಿನಲ್ಲಿದ್ದ ಜಪಾನಿನ ಕೋಗಿಸಾನ್, ಅವರ ದೇಶದ ಸಮು ರಾಯ್ ಯೋಧರ ಬಗ್ಗೆ ವಿವರಿಸುತ್ತಿದ್ದ, ಎಲ್ಲಾ ಕೇಳಿಸಿಕೊಂಡ ಅಲೆಕ್ಸಿ ಶುರು ಮಾಡಿದ.

"ಜಾರ್ ದೊರೆಗಳ ಕಾಲದಲ್ಲಿ ರಷ್ಯಾದಲ್ಲೂ ಅತ್ಯಂತ ವೀರ ಯೋಧರಿದ್ದರು. ಅವರನ್ನು ಹುಸ್ಸಾರ್ಸ್ ಅಂತ ಕರೆಯುತ್ತಿದ್ದರು. ಆಹಾ ! ಅವರ ಗಾಂಭೀರ್ಯ ಏನು ! ಠೀವಿ ಏನು ! ಊರಿನಲ್ಲಿ ಅವರು ಕುದುರೆಯ ಮೇಲೆ ಹೊರಟರೆ ಅವರಿಗೆ ರಾಜಮರ್ಯಾದೆ. ಅವರುಗಳೂ ಸಹಾ, ಯುದ್ಧ ಕಾಲದಲ್ಲಿ ಅಷ್ಟೇ ಶೌರ್ಯದಿಂದ ಪ್ರಾಣದ ಹಂಗು ತೊರೆದು ಹೋರಾಡುತ್ತಿದ್ದರು. ಒಮ್ಮೆ ಒಬ್ಬ ಹುಸ್ಸಾರ್ ಪ್ಯಾರಿಸಿಗೆ ಹೋಗಿದ್ದನಂತೆ. ಪ್ಯಾರಿಸ್ ಅಂದರೆ ಗೊತ್ತಲ್ಲ. ಪ್ರಪಂಚದ ಅತಿ ಮೋಹಕ ತರುಣಿಯರ ಊರು ಅದು. ನಮ್ಮ ವೀರಾಗ್ರಣಿ ಒಂದು ಹೆಣ್ಣನ್ನ ಭೇಟಿಮಾಡಿ ಕೆಳಗಿಳಿದು ಒಂದು ಕುದುರೆ ಹತ್ತಿದನಂತೆ. ಮಹಡಿಯ ಕಿಟಕಿಯಿಂದ ಆ ತರುಣಿ ತಲೆಹಾಕಿ "ಹುಸಾರ್ ! ಹುಸಾರ್ ! ಹಣಾ !'' ಅಂತ ಕೂಗಿದಳಂತೆ. ಆಗ ನಮ್ಮ ಶೂರ ಏನಂದ ಗೊತ್ತೆ ?'' ಅಲೆಕ್ಸಿ ಕಥೆ ನಿಲ್ಲಿಸಿದ.

"ಏನಂದ ?" ನಾವೆಲ್ಲಾ ಒಕ್ಕೊರಲಿನಿಂದ ಕೇಳಿದೆವು.

"ಉದಾತ್ತ ಮನೋಭಾವದಿಂದ ಅವನಂದ" ಛೀ! ರಷ್ಯದ ಹುಸಾರ್ ಎಂದಿಗೂ ಹಣ ತೆಗೆದುಕೊಳ್ಳುವುದಿಲ್ಲ !"

"ಇನ್ನೊಮ್ಮೆ ಮಾತು ಸಹಜವಾಗಿಯೇ ಕಮ್ಯೂನಿಜಂ ಕಡೆಗೆ ಹಾಲಿತು. ಅಲೆಕ್ಸಿಯು ಚುಟುಕ ಎಂದಿನಂತೆ ಎಸರೆದ.

"ನಮ್ಮ ಹಿಂದಿನ ಪ್ರಧಾನ ಕಾರ್ಯದರ್ಶಿ ಬ್ರೆಜ್ನೇವ್ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡಾಗ ಅವರಿಗೆ ಹೆಮ್ಮೆ ಎನಿಸಿತ್ತು. ಮಾತೃ ವಾತ್ಸಲ್ಯದಿಂದ ಆವರು ತಮ್ಮ ತಾಯಿಯ ಬಳಿಗೆ ಹೋಗಿ, 'ನೋಡಮ್ಮಾ ನನ್ನ ಕಾರು ಹೇಗೆ ಥಳ ಥಳಾ ಅಂತ ಹೊಳೆಯುತ್ತಾ ಇದೆ' ಅಂತ ಹೇಳಿದ. ತಕ್ಷಣ ಅವರ ತಾಯಿ ಅಳಲು ಶುರು ಮಾಡಿದಳು. ನಂತರ ಬ್ರೆಜ್ನೇವ್ ತಮ್ಮ ಬೇಸಿಗೆ ಮನೆಯನ್ನು ತೋರಿಸಿದಾಗಲಂತೂ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭ.

'ಯಾಕಮ್ಮಾ ಅಳುತ್ತಿದ್ದೀಯ ?' ಅಂತ ಪ್ರಶ್ನಿಸಿದಾಗ ಆಕೆ ಹೇಳಿದ್ದು

"ಅಯ್ಯೋ ಮಗು ! ಇಷ್ಟೆಲ್ಲಾ ಆಸ್ತಿ ಇದೆ. ಕಮ್ಯೂನಿಸ್ಟರು ಬಂದರೆ ಏನಾಗ್ತೀಯಪ್ಪಾ ?'

* * * *

ಅಲೆಕ್ಸಿ, ನೀನು ಕ್ರೋಕೋಡಿಲ್ (ರಷ್ಯದ ಹಾಸ್ಯ ಮಾಸ ಪತ್ರಿಕೆ) ಓದೋಲ್ಲವೇ ?" ಅಂತ ಕೇಳಿದೆ.

"ಇಲ್ಲ, ಖಂಡಿತಾ ಇಲ್ಲ. ನಮ್ಮ ದಿನನಿತ್ಯ ಜೀವನದಲ್ಲಿ ಆಗೋ ಹಾಸ್ಯ ಪ್ರಸಂಗಗಳನ್ನು ನೋಡಿ ನಗುವುದಕ್ಕೇ ಸಮಯ ಇರೋದಿಲ್ಲ. ಇನ್ನು ಪತ್ರಿಕೆ ಓದಿ ನಗೋದಕ್ಕೆ ವೇಳೆ ಎಲ್ಲಿಂದ ತರೋಣ ?'' ಅಂದ.

ಅವನ ಹಾಸ್ಯ ಪ್ರಜ್ಞೆ ನೋಡಿ ಕರುಬಿದೆ.

ಜೋರಾಗಿ ಬಸ್ ಓಡಿಸುತ್ತಿದ್ದನಲ್ಲ ಅವತ್ತು ಹೆಬ್ಬಿಗುಬ್ಬಾಲೆಯಲ್ಲಿ, ಅದರ ಕಾರಣ ತಿಳೀತು. ಬಸ್ಸಿಗೆ ಬ್ರೇಕ್ ಇತ್ತಿಲ್ಲವಂತೆ. ಬೇಗ ಗ್ಯಾರೇಜ್ ಸೇರೋಣ ಅಂತ ಹೋಗ್ತಿದ್ದನಂತೆ ! ಪಾಪ !

—ಥಳಕು–ತುಣುಕು

ಕೊರವಂಜಿಯಿಂದ



ಕಿಟ್ಟಿಯ ಮದುವೆ

—ಹಾರ್ನಳ್ಳಿ

ಮೂವತ್ತೈದು ವರ್ಷ ವಯಸ್ಸಾಗಿದ್ದರೂ ಮದುವೆಯ ಮಾತೆತ್ತಿದರೆ ಕಿವಿ ಮುಚ್ಚಿಕೊಳ್ಳುತ್ತಿದ್ದ ನಮ್ಮ 'ಕಿಟ್ಟಿ'. ಬೀದಿಯಲ್ಲಿ ನಡೆಯುವಾಗ ಎದುರಿಗೆ ಹುಡುಗಿಯರು ಸಿಕ್ಕಿದರೆ ಹೌಹಾರಿ ಜೋರಾಗಿ ಹೆಜ್ಜೆ ಹಾಕಿ ಅವರ ದೃಷ್ಟಿಯಿಂದ ಪಾರಾಗುತ್ತಿದ್ದ. ಸ್ನೇಹಿತರು ಕೆಣಕಿ ಮಾತು ತೆಗೆದರೆ ಮಾತು ಮರೆಸಿ ಇನ್ನಾವುದೋ ವಿಚಾರ ಎತ್ತುತ್ತಿದ್ದ. ಮದುವೆಯಾಗಿ ಅದರ ಸಾರ (!) ವನ್ನೂ ತಿಳಿದಂಥ ನಮ್ಮವರು ಆಗಾಗ್ಗೆ ನಯ ವಿನಯ, ಒಂದೊಂದು ಸಾರಿ ದಬಾವಣೆಯಿಂದ ಹೇಳಿದ ಮಾತೆಲ್ಲ ತಿರಸ್ಕರಿಸಿದ್ದ. ಇಷ್ಟು ನಾವು ಅವನೊಡನಾಡಿದ್ದರೂ ಅವನ ಅಂತರಂಗ ತಿಳಿದಿರಲಿಲ್ಲ. ಹೆಣ್ಣಿಗೆ ಹೆದರಿದ್ದನೋ, ಅಥವಾ ಸಂಸಾರಕ್ಕೆ ಹೆದರಿದ್ದನೋ ಅಥವಾ ಏನೂ ತಿಳಿಯದೆ ಅನಿಶ್ಚಿತ ಭಾವನೆಯಿಂದ ಇರುತ್ತಿದ್ದನೋ ಎಂಬುದೇ ಪತ್ತೆಯಾಗಿರಲಿಲ್ಲ.

"ಅವನು ಬ್ರಹ್ಮಚಾರಿಯಾಗಿದ್ದರೆ ನಿಮಗೇನು ನಷ್ಟವಾಗಿತ್ತು?" ಎಂದು ನೀವು ಕೇಳಬಹುದು. ಅದನ್ನೇ ಹೇಳುತ್ತೇನೆ. ಮನೆಯಲ್ಲಿ ಅವನನ್ನು ಹಿಡಿದು ಹಾಕುವ ಪ್ರಾಣಿ ಇಲ್ಲದ್ದರಿಂದ ಸದಾ "ಊರಿನ ದನ ಕಾಯುವ" ಕೆಲಸವನ್ನೂ ಮಾಡುತ್ತ ಇದ್ದ. ಯಾವ ಸಂಘ ನೋಡಲಿ, ಯಾವ ಸೊಸೈಟಿ ನೋಡಲಿ ಇವನೇ ಕಾರ್ಯದರ್ಶಿ, ಇವನೇ ಅಧ್ಯಕ್ಷ. ಇವನೇ ಸೂತ್ರಧಾರ. ಇವೆಲ್ಲಾ ಸಾಲದಿದ್ದರೆ "ರೇಷನ್ ಕಾರ್ಡುದಾರರ ಸಂಘ" ಎಂತಲೋ, "ಬಟ್ಟೆ ಉಡುವವರ ಸಂಘ" ಎಂತಲೋ ಹೊಸದಾಗಿ ಸ್ಥಾಪಿಸಿ ಅದನ್ನೂ ನಡೆಸುತ್ತಾನೆ. ಹೋದ ವರ್ಷ ಗೆಳೆಯರು ಹೆಚ್ಚಿ, ರೇಷನ್ ಖೋತಾ ಬಿದ್ದಾಗ ಮತ್ತು ತನಗೆ ಬಟ್ಟೆ ದೊರೆಯುವುದು ಸ್ವಲ್ಪ ಕಷ್ಟವಾಗಿದ್ದಾಗ ಮೇಲೆ ಹೇಳಿದ ಎರಡು ಸಂಸ್ಥೆ ಕಟ್ಟಿ, ಆ ಮೂಲಕ ಅನುಕೂಲ ಪಡೆದಿದ್ದ. ಇದೆಲ್ಲದರಿಂದ ನಮಗೇನೂ ನಷ್ಟವಿರಲಿಲ್ಲ. ಆದರೆ ಈ ವರ್ಷ

ಮುನಿಸಿಪಾಲಿಟಿ ಚುನಾವಣೆಗೆ ಅವನು ಕೈ ಹಾಕಿದಾಗ ನಿಜವಾಗೂ ನಮಗೆ ಕುತ್ತಿಗೆಗೇ ಬಂತು.

ಇಮುವರೆಗೂ ನಾವು ಹೇಗೋ ಹಾಗೆ ಪೌರಸಭೆಗಳಲ್ಲಿ ಶಾಶ್ವತವಾಗಿ ಇದ್ದುಕೊಂಡು ಬಂದಿದ್ದೆವು. ಯಾರೂ ನಮ್ಮ ಮುಂದೆ ನಿಲ್ಲುವವರಿಲ್ಲ. ಎಲ್ಲೆಲ್ಲೋ ಒಂದೊಂದು ಬಾರಿ ಕೆಲವರು ವ್ಯಾಪಾರಸ್ಥರು ತಮ್ಮ ಮನೆ ಲೈಸೆನ್ಸ್ ಇಲ್ಲದೆ ಕಟ್ಟಿದ್ದನ್ನು ಉಳಿಸುವುದಕ್ಕಾಗಿಯೋ, ಅಥವಾ ಹೊಸದಾಗಿ ಲೈಸೆನ್ಸ್ ಪಡೆಯಲೋಸುಗವೋ ಚುನಾವಣೆಗೆ ನಿಂತು ಜಯಶೀಲರಾಗಿ ತಮ್ಮ ಕೆಲಸ ಮಾಡಿಕೊಂಡದ್ದು ಉಂಟು. ಅದೂ ಅವಶ್ಯಕವಿರಲಿಲ್ಲ ಎನ್ನಿ. ಏಕೆಂದರೆ ಕಳೆದ ವರ್ಷ ನಮ್ಮ ಪೌರಸಭೆ ಕಟ್ಟಡದ ಪಕ್ಕದಲ್ಲಿರುವ ಸಿನಿಮಾ ಮಾಲೀಕ ರಸ್ತೆಯಲ್ಲಿ ಎರಡು ಅಡಿ ಅಗಲ ಜಾಗ ಒತ್ತುವರಿ ಮಾಡಿಸಿಕೊಳ್ಳುವ ಸಲುವಾಗಿ ಮುನಿಸಿಪಾಲಿಟಿ ಉಮೇದುವಾರನಾಗಿ ನಿಂತ. ನಾನು ಅವನಿಗೆ ಭರವಸೆ ಕೊಟ್ಟು ನಾನೇ ಮಾಡಿಸಿಕೊಟ್ಟಿದ್ದೆಂದೂ,' ಅದಕ್ಕಾಗಿ ನಮ್ಮ ಪೌರ ಸಭೆಯ ಮುಂದೆ ಎರಡು ಅಡಿ ಅಗಲ ಜಾಗ ಬೇಕೆಂದೂ ಸುಳ್ಳು ಹೇಳಿ ಅದನ್ನು ಮಾಡಿಸಿದ್ದೂ ಆಯಿತಷ್ಟೆ. ಹಾಗೆಲ್ಲಾ ನಾವು ಆರಾಮವಾಗಿ ಪೌರ ಕೆಲಸ ಮಾಡುತ್ತಿರುವಾಗ ಶಿವಪೂಜೆಯಲ್ಲಿ ಕರಡಿ ಬಿಟ್ಟಂತೆ ಈ ಪ್ರಾಣಿ ಮುನಿಸಿಪಾಲಿಟಿಗೆ ಕೈ ಹಾಕಬೇಕೆ? ನಮ್ಮ ಸರ್ವಾಧಿಕಾರಕ್ಕೆ ಇನ್ನೂ ಬಲಿ ಬಿತ್ತು ಎಂದು ನಮಗೆ ಹೆದರಿಕೆ ಆದದ್ದರಲ್ಲಿ ಆಶ್ಚರ್ಯವೇನಿಲ್ಲ!

ಇದಕ್ಕೆ ಏನು ಮದ್ದು ಎಂದು ನಾನು, ಕಾಣೆ, ಪಾಪಣ್ಣ, ರಾಮಸ್ವಾಮಿ ಎಲ್ಲಾ ಕುಳಿತು ಯೋಚಿಸಿದೆವು. ನೇರವಾಗಿ ಹೇಳಿದರೆ ನಡೆಯದು. ಕೊನೆಗೆ ಏನಾದರೂ ಮಾಡಿ ಈ ಪ್ರಾಣಿಯ ಕುತ್ತಿಗೆಗೆ ಒಂದು ಹೆಣ್ಣನ್ನು ಕಟ್ಟಿದರೆ ಎಲ್ಲಾ ಸರಿ ಹೋಗುವುದು ಎಂಬ ತೀರ್ಮಾನಕ್ಕೆ ಬಂದೆವು. ಅದಕ್ಕೆ ತಕ್ಕ ಉಪಾಯವನ್ನು ಮಾಡಿದೆವು.

ಪುರಸಭೆ ಚುನಾವಣೆ ಪ್ರಾರಂಭವಾಗುತ್ತಿದ್ದಂತೆಯೇ ಕಿಟ್ಟಿಯೂ ಬಣ್ಣ ಬದಲಾಯಿಸಿದ. ಹೆಂಗಸರ ಮುಖ ಕಂಡರೆ ಮೈಲಿ ದೂರ ಓಡಿಹೋಗುತ್ತಿದ್ದವನು ಬೆಳಗಾಗುತ್ತಲೇ ಓಟರುಗಳ ಬಾಗಿಲಲ್ಲಿ ನಿಂತು "ರಂಗಮ್ಮನವರೇ, "ಸುಶೀಲಮ್ಮನವರೆ" "ತಿಮ್ಮಮ್ಮನವರೆ" ಎಂದು ಕೂಗಲು ಪ್ರಾರಂಭಿಸಿದ. ಇವನ ಈ ಗತಿಯನ್ನ ಕಂಡು ನಮಗೆ ತುಂಬಾ ಹಿಗ್ಗು. ನಮ್ಮ ಗುಂಪಿನ ಪೈಕಿ ನಾನು ನಮ್ಮ 'ಪ್ಲಾನ್' ಅನ್ನು ಕಾರ್ಯಗತ ಮಾಡಲು ನೇಮಿತನಾದೆ. ಕಿಟ್ಟಿಯ ಸ್ನೇಹಿತನೂ ಆದ್ದರಿಂದ ಅವನ ಹಿಂದೆ ಮುಂದೆ ಸುತ್ತಲು ಪ್ರಾರಂಭಿಸಿದೆ. ನೀನು ಹೀಗೆ ಮಾಡಬೇಕು, ಹಾಗೆ ಮಾಡಬೇಕು ಎಂದು ಸಲಹೆ ಇತ್ತೆ. "ಅಯ್ಯಾ, ಈಗ ಹೆಂಗಸರಿಗೂ

ಓಟು ಬಂದಿದೆ. ಅವರ ಕಾಲಿಗೆ ಬೀಳದಿದ್ದರೆ ನೀನು ಮುಳುಗಿ ಹೋಗುತ್ತೀಯ. ನಿನ್ನ ವಿರೋಧಿ ಪುಟ್ಟಯ್ಯ ನಿನಗೆ ನೀರು ಕುಡಿಸುತ್ತಾನೆ" ಎಂದು ಹೇಳಿ ರೇಗಿಸಿದೆ. "ಏನಾದರೂ ಆಗಿಹೋಗಲಿ. ಪುಟ್ಟಯ್ಯನನ್ನು ಸೋಲಿಸಬೇಕು. ಇಲ್ಲದಿದ್ದರೆ ನನ್ನ ಘಾನ ಉಳಿದೀತೇ?" ಎಂದು ರೇಗಿದ ಕಿಟ್ಟಿ. ಇದೇ ಅವಕಾಶ ಉಪಯೋಗಿಸಿ ಕೊಂಡೆ ನಾನು.

ನನ್ನ ಪ್ಲಾನ್ ಪ್ರಕಾರ ಈ ಬ್ಲಾಕ್‌ನ ಹೆಂಗಸರ ಸಭೆಯೊಂದನ್ನ ಕರೆಸಿದೆ. ಮಾರುತಿ ದೇವಸ್ಥಾನದಲ್ಲಿ ನನ್ನ ಪತ್ನಿಯ ಮುಂದಾಳತ್ವದಲ್ಲಿಯೇ ಸಭೆ ಸೇರಿತು. ಆದರೆ ಕಿಟ್ಟಿ ಎಣಿಸಿದ್ದಂತೆ ಅಮ್ಮಂದಿರಾಗಲೀ, ಮುಪ್ಪಿನ ಮುತ್ತೈದೆಯರಾಗಲೀ, ಸಭೆಗೆ ಹಾಜರಿರಲಿಲ್ಲ. ಎಲ್ಲಾ ಹುಡುಗುಪಾಳ್ಯವಾಗಿತ್ತು. ಇದನ್ನ ದೂರದಿಂದ ನೋಡಿದ ಕಿಟ್ಟಿ. ಕೌರವನ ಸೈನ್ಯವನ್ನು ನೋಡಿದ ಉತ್ತರ ಕುಮಾರನಂತೆ ಹಿಂದಕ್ಕೆ ಪಲಾಯನಮಾಡಲು ತೊಡಗಿದ್ದ. ಆಗ ಅವನಿಗೆ ಪುಟ್ಟಯ್ಯನನ್ನ ಜ್ಞಾಪಕಕ್ಕೆ ತಂದು, ಮಾತಿನಲ್ಲೇ ಪುಟ್ಟಯ್ಯನನ್ನ ಸೀಳಿಹಾಕಿ ಪುನಃ ದೇವಸ್ಥಾನದ ಹತ್ತಿರಕ್ಕೆ ಕರೆದು ಕೊಂಡು ಹೋಗುವ ಹೊತ್ತಿಗೆ ಸಾಕುಸಾಕಾಗಿ ಹೋಯ್ತು.


ನಾನು, ಕಿಟ್ಟಿ ವಿನಃ ಬೇರೆ ಒಂದು ಗಂಡು ಪಿಳ್ಳೆ ಇರಲಿಲ್ಲ. ಕಿಟ್ಟಿಗೆ ಒಂದು ಕುರ್ಚಿ ಹಾಕಿ ಕೂರಿಸಿ ನಾನು ನೆಲದ ಮೇಲೆ ಕುಳಿತೆ. ನನ್ನ ಪತ್ನಿ ಪ್ರಾಸ್ತವಿಕ ಭಾಷಣ ಮಾಡಿದಳು. "ಇವರು ನಮ್ಮ ಯಜಮಾನರ ಸ್ನೇಹಿತರು. ಉತ್ಸಾಹಿಗಳು. ಎಷ್ಟೋ ಸೇವೆ ಕಾರ್ಯ ಮಾಡಿದ್ದಾರೆ. ಮದುವೆ ಆಗದಿದ್ದರೂ (ನನ್ನ ಕಡೆ ನೋಡುತ್ತ) ಈಗ ನಗರ ಪಿತೃವಾಗಬೇಕೆಂದು ಹೊರಟಿದ್ದಾರೆ... ಇಷ್ಟು ಹೇಳು ತ್ತಿರುವಾಗಲೇ ಅಲ್ಲಲ್ಲಿ ಗುಜುಗುಜು ಪ್ರಾರಂಭವಾಯ್ತು. "ಏನೇ ಮಂಜುಳ ಅದು. ನಿಜವಾದ ಪಿತೃ ಆಗದವರು ನಗರ ಪಿತೃ ಹೇಗೆ ಆಗುತ್ತಾರೆಯೆ?" ಎಂದು ಮೂಲೆ ಯಿಂದ ಧ್ವನಿ ಹೊರಟಿತು. ಕಿಟ್ಟಿ ಮೋರೆ ಕಪ್ಪಿಟ್ಟಿತ್ತು. ಏನೋ ಮಸಲತ್ತು ನಡೆ ದಿದೆ ಎಂದು ಅವನು ನನ್ನ ಕಡೆ ದುರದುರನೆ ನೋಡಿದ. ನಾನು ಏನೂ ತಿಳಿಯದವ ನಂತೆ ತಲೆ ತಗ್ಗಿಸಿಕೊಳ್ಳುತ್ತಿದ್ದೆ. ಅಷ್ಟರಲ್ಲಿ ನಾಲ್ಕೈದು ಜನ ಹುಡುಗಿಯರು ದಡ ದಡನೆ ಎದ್ದು ಬಂದು, "ಏನ್ರೀ, ಇವರಿಗೆ ಓಟು ಹಾಕು ಎಂತ ಕೇಳೋಕೆ ಬಂದಿದೀರ. ನಾಚಿಕೆ ಆಗುಲ್ವೆ? ನಮ್ಮ ಕುಲಕ್ಕೆ ಅವಮಾನ ಮಾಡಿದ್ದಾರೆ ಇವರು, ಹಾಗೆ ಹೋಗಿ" ಎಂತ ಕೂಗಾಡಿದರು. ನಾನು ಏನೇನೋ ಹೇಳಿ ಸಮಾಧಾನಮಾಡಲು ಯತ್ನಿಸಿದೆ. ಕಡೆಗೆ "ಸ್ವಲ್ಪ ತಾಳಿ. ನಿಮ್ಮೆಲ್ಲರ ಮುಂದೆ ಈಗ ಪ್ರತಿಜ್ಞೆ ಮಾಡುತ್ತಾರೆ. ನೀವೆಲ್ಲ ಕೊಡಿಸಿದ ಹೆಣ್ಣನ್ನು ಮದುವೆ ಆಗುತ್ತೇನೆ ಎಂದು. ಆದರೆ ಒಂದು ಷರ್ತಿನ ಮೇಲೆ. ನೀವು ಓಟು ಗಳಿಸಿಕೊಟ್ಟು ಕಿಟ್ಟಿಯನ್ನು ಚುನಾಯಿಸಬೇಕು" ಎಂದು ತೀರ್ಮಾನ ಕೊಟ್ಟೆ. ಸಭೆಯಲ್ಲಿ ಚಪ್ಪಾಳೆಯ ಸುರಿಮಳೆಯಾಯ್ತು. ಕಿಟ್ಟಿ ರೇಗಿ

ನನಗೆ ಹೊಡಿಯೋದಕ್ಕೆ ಬಂದ. ನನ್ನ ಹೆಂಡತಿ ಮಧ್ಯದಲ್ಲಿದ್ದುದರಿಂದ ನಾನು ಬದುಕಿದೆ. ಇಲ್ಲಿಂದ ಪಾರಾಗಲು ಬಾಗಿಲು ಕಡೆಗೆ ಹೊರಡಲನುವಾದೆ. ಬಾಗಿಲಲ್ಲಿ ನಾಲ್ಕು ಜನ ಕನ್ಯೆಯರು ಗುಂಪು ಕಟ್ಟಿಕೊಂಡು ನಿಂತುಬಿಟ್ಟಿದ್ದಾರೆ. ಹೀಗಾಗಿ ದಿಕ್ಕು ಗೆಟ್ಟು ನಿಂತುಬಿಟ್ಟ ನಮ್ಮ ಕಿಟ್ಟಿ.

ಇದೆಲ್ಲಾ ನೋಡುತ್ತಿದ್ದ ನನ್ನ ಪತ್ನಿ ಕಿಟ್ಟಿಯ ಪರ ವಕಾಲತ್ತು ವಹಿಸಿ ಎಲ್ಲ ರನ್ನೂ ಮನೆಗೆ ಕಳಿಸಿದಳು. ನಮ್ಮ ಮನೆಗೆ ಊಟಕ್ಕೆ ಬಾ ಎಂದು ಹೇಳಿ ಮನೆಗೆ ಎಲ್ಲರನ್ನೂ ಕರೆತಂದಳು.

ಆ ದಿನ ಊಟದ ಸಮಯದಲ್ಲಿ ಹೊಸ ಹುಡುಗಿಯೊಂದು ಬಂದು ಕಿಟ್ಟಿಯ ಎದುರು ಪಂಕ್ತಿಯಲ್ಲಿ ಊಟಕ್ಕೆ ಕುಳಿತಿತ್ತು. ಕಿಟ್ಟಿ ಚುನಾವಣೆಯನ್ನೆಲ್ಲಾ ಮರೆತು ಕೇಕೆ ಹಾಕುತ್ತಾ ಊಟ ಹೊಡೆಯುತ್ತಿದ್ದ.

ಅಂತೂ ಕೊನೆಗೂ ಗಂಟು ಹಾಕಿದ್ದಾಯ್ತು. ಕಿಟ್ಟಿ ಚುನಾಯಿತನಾಗಿಯೂ ಬಂದ. ಆದರೆ ನಮ್ಮ ಕೆಲಸದಲ್ಲಿ ಕೈ ಹಾಕಲು ಈಗ ಅವನಿಗೆ ಬಿಡುವಿಲ್ಲ.



ನಮ್ಮೆಜಮಾನ್ರು ಬರಪೀಡಿತ ಪ್ರದೇಶಗಳಿಗೆ ಪ್ರವಾಸ ಹೋಗಿ ಈಗ್ತಾನೆ ಬಂದ್ರು ತುಂಬಾ ಸೊರಗ್ಹೋಗಿದಾರೆ.

17

ಮೂವರು ಮೇಧಾವಿಗಳು

— ಜಿ.ಎಸ್.ಜಿ.

1970

ವೆಂಕ, ನಾಣಿ ಮತ್ತು ಸೀನ ನನ್ನ ಪ್ರತಿಭಾವಂತ ಶಿಷ್ಯರಲ್ಲಿ ಪ್ರತಿಭಾವಂತರು. ನನಗೂ ಅವರಿಗೂ ಬಿಡಲಾಗದ ನಂಟು. ಆಗಾಗ ಮನೆಗೆ ಬಂದು ಹೋಗುತ್ತಿದ್ದರು.

ಮೂರ ಜನರೂ ಪದವಿ ಪೂರ್ವ ಪರೀಕ್ಷೆಯನ್ನು ಪ್ರಥಮ ದರ್ಜೆಯಲ್ಲಿ ಮುಗಿಸಿದ್ದರು. ಮುಂದೆ ಏನು ಮಾಡಬೇಕು ಎಂಬುದನ್ನು ಸಮಾಲೋಚಿಸಲು ನಮ್ಮ ಮನೆಗೆ ಬಂದಿದ್ದರು. ವೆಂಕ—ತಾನು ಇಂಜಿನಿಯರಿಂಗ್‌ಗೆ ಹೋಗುವುದಾಗಿ ತಿಳಿಸಿದ. ನಾಣಿ ಡಾಕ್ಟರ್ ಆಗಬೇಕೆಂದಿದ್ದ. ಸೀನ ತಾನು ಎಂ.ಎಸ್‌ಸಿ., ಓದುವುದಾಗಿ ಹೇಳಿದ. ಸಂತೋಷವಾಗಿತ್ತು. ಹರಸಿ ಕಳಿಸುವ ಮೊದಲು ಒಂದು ನಿಬಂಧನೆಯನ್ನು ಹಾಕಿದ್ದೆ. ಅವರು ಓದು ಮುಗಿಸಿ ಕೆಲಸ ಸಿಕ್ಕಿ ಒಂದು ವರ್ಷದ ಬಳಿಕ ನನ್ನನ್ನು ನೋಡಬೇಕೆಂದೂ, ಅವರ ಸ್ಥಿತಿಗತಿಗಳನ್ನು ತಿಳಿಸಬೇಕೆಂದೂ ಹೇಳಿದ್ದ.

1977

ಆ ದಿನ ಬಂದೇ ಬಿಟ್ಟಿತು. ಅವರನ್ನು ನಿರೀಕ್ಷಿಸುತ್ತಿದ್ದೆ. ಅವರು ಬಂದೇ ಬಂದರು. ವೆಂಕ ಇಂಜಿನಿಯರಿಂಗ್ ಓದಿದುದಾಗಿಯೂ, ಇಪ್ಪತ್ತು ಸಾವಿರ ಖರ್ಚು ಮಾಡಿ ಲೋಕೋಪಯೋಗಿ (P.W.D.) ಇಲಾಖೆಯಲ್ಲಿ ಕೆಲಸ ಪಡೆದಿರುವುದಾಗಿಯೂ. ಮೇಲು ಸಂಪಾದನೆ ಚೆನ್ನಾಗಿಯೇ ಇರುವುದಾಗಿಯೂ ತಿಳಿಸಿದ್ದ.

ನಾಣಿ ಸರ್ಕಾರದ ಆರೋಗ್ಯ ಇಲಾಖೆಯಲ್ಲಿ ಡಾಕ್ಟರಾಗಿರುವುದಾಗಿಯೂ, ತನಗೂ ಇಪ್ಪತ್ತು ಸಾವಿರದ ಮೇಲೆ ಖರ್ಚಾಯಿತೆಂದೂ ತಿಳಿಸಿದ್ದ.

ಸೀನ ಎಂ.ಎಸ್‌ಸಿ., ಮುಗಿಸಿದ ನಂತರ ಕೆಲಸ ಸಿಕ್ಕಲಿಲ್ಲವೆಂದೂ, ಏನೂ ಮಾಡಲು ತೋಚದೆ ಮದುವೆ ಆದದ್ದಾಗಿಯೂ ತಿಳಿಸಿದ್ದ. ತನ್ನ

ಹೆಂಡತಿ ಬಿ.ಎಸ್‌ಸಿ., ಬಿ.ಎಡ್., ಮಾಡಿದ್ದಾಳೆಂದೂ ಅವಳಿಗೆ ಕೆಲಸ ಸಿಕ್ಕರೂ ಸಿಕ್ಕಬಹುದೆಂದೂ ತಿಳಿಸಿದ್ದ.

ಸೀನನ ಸ್ಥಿತಿ ತಿಳಿದು ಮರುಕವಾಯಿತು. ಇನ್ನೆರಡು ವರ್ಷ ಗಡುವು ಹಾಕಿ ದಿನವನ್ನು ಗೊತ್ತು ಮಾಡಿ ಪುನಃ ನನ್ನನ್ನು ನೋಡಬೇಕೆಂದು ಹೇಳಿ ಕಳಿಸಿದ್ದೆ.

1979

ನಿಗದಿಯಾದ ದಿನದಂದು ವೆಂಕ ಸ್ಕೂಟರಿನ ಮೇಲೆ ಬಂದಿದ್ದ. ನಾಣಿ ಮೋಟಾರು ಸೈಕಲ್ ಮೇಲೆ ಬಂದಿದ್ದ. ಸೀನನ ಸುಳಿವೇ ಇಲ್ಲ.

ವೆಂಕ ತಾನು ಚೆನ್ನಾಗಿರುವುದಾಗಿಯೂ, ಇಪ್ಪತ್ತು ಸಾವಿರ ರೂಪಾಯಿಗಳನ್ನು ಸಿಮೆಂಟು ಒಂದರಿಂದಲೇ ಗಳಿಸಿದ್ದಾಗಿಯೂ ಉಳಿದಂತೆ ಎಲ್ಲ ಅನುಕೂಲವಾಗಿರುವುದಾಗಿಯೂ ಸಂಬಳವನ್ನು ಬಳಸುವ ಪ್ರಮೇಯವೇ ಒದಗಿಲ್ಲವೆಂದೂ ತಿಳಿಸಿದ್ದ.

ಡಾಕ್ಟರ್ ನಾಣಿ ಸದ್ಯದಲ್ಲಿ ಹಳ್ಳಿಯಲ್ಲಿರುವುದಾಗಿಯೂ, ತಾನು ಹಾಕಿದ್ದ ಬಂಡವಾಳ ಆರು ತಿಂಗಳಲ್ಲೇ ತಿರುಗಿ ಬಂದಿತೆಂದೂ, ವೃತ್ತಿ ರಹಸ್ಯವನ್ನು ಕೇಳಬಾರದೆಂದೂ ಸಂಬಳ ಹಾಗೆಯೇ ಉಳಿಯುತ್ತಿರುವುದಾಗಿಯೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೂಡ ತಾನು ಮೆಚ್ಚಿನ ವೈದ್ಯನಾಗಿರುವುದಾಗಿಯೂ ಹೇಳಿದ್ದ.

ಶಿಷ್ಯರ ಉತ್ಕರ್ಷವನ್ನು ತಿಳಿದು ಆನಂದವಾಗಿತ್ತು. ಸೀನನ ಸುದ್ದಿಯೇ ಇಲ್ಲದ್ದು ಆತಂಕವಾಗಿತ್ತು. ಅಷ್ಟರಲ್ಲಿ ಒಂದು ಕಾರು ಮನೆ ಮುಂದೆ ಬಂದು ನಿಂತಿತ್ತು. ಅದರಲ್ಲಿಂದ ಇಳಿದಿದ್ದ ಸೀನ ! ಎಲಾ ಇವನ !" ಎಂದುಕೊಂಡೆ.

ಅನಂತರ ಅವನಿಂದ ತಿಳಿದದ್ದು ಇಷ್ಟು.

ಸೀನ ಕೆಟ್ಟು ಪಟ್ಟಣ ಅಂದರೆ ಬೆಂಗಳೂರು ಸೇರಿದನಂತೆ. ಅಲ್ಲಿ ಒಂದು ಇಂಗ್ಲೀಷ್ ಮೀಡಿಯಂ ನರ್ಸರಿ ಶಾಲೆ ಪ್ರಾರಂಭಿಸಿದನಂತೆ. ನೂರು ಮಕ್ಕಳು. ಐದು ಸಾವಿರ ರೂಪಾಯಿ ವಂತಿಗೆ. ತಿಂಗಳಿಗೆ ಐವತ್ತು ರೂಪಾಯಿ ಶುಲ್ಕ. ಸರ್ಕಾರದಿಂದ ಮಂಜೂರಾತಿ ಪಡೆಯಲು ಏನು ಬೇಕೋ ಅದನ್ನು ಮಾಡಿದ್ದನಂತೆ. ಸರ್ಕಾರದಿಂದ ಅನುದಾನವಿಲ್ಲವಂತೆ.

ವಂತಿಗೆಯಿಂದ ಸೇರಿದ್ದ ಐವತ್ತು ಸಾವಿರ ಬಂಡವಾಳದೊಡನೆ "ಸೀನೂ ಫೈನಾನ್ಸ್" ಪ್ರಾರಂಭಿಸಿದನಂತೆ. ಠೇವಣಿ ಇಡುವವರಿಗೆ ತಿಂಗಳಿಗೆ ನೂರಕ್ಕೆ ಎರಡರಂತೆ ಬಡ್ಡಿ ಕೊಡುತ್ತಾನಂತೆ. ಮನೆ, ಮಾರ, ಚಿನ್ನ, ಅದು ಇದು ಆಧಾರ ಇಟ್ಟುಕೊಂಡು ಹೆಚ್ಚಿನ ಬಡ್ಡಿಗೆ ಸಾಲ ಕೊಡುತ್ತಾನಂತೆ. ಈಗ ಸುಮಾರು ಹತ್ತು ಲಕ್ಷದ ಕುಳ ಆಗಿದ್ದಾನಂತೆ. ಬೆಂಗಳೂರಲ್ಲಿ ಮನೆ ಕೊಂಡಿದ್ದಾನಂತೆ.

ಖುಷಿ ಆಯಿತು. ಸೀನೂ ಅಂತೂ ಮುಂದಕ್ಕೆ ಬಂದಿದ್ದ.

1987

ನನಗೆ ಕೆಲಸದಿಂದ ನಿವೃತ್ತಿ ಆಗಿ ನಾಲ್ಕು ವರ್ಷವಾಗಿದೆ. ನನ್ನ ಮಕ್ಕಳಿಗೆ ಸಾಕಷ್ಟು ಓದಿಸಲಾಗಲಿಲ್ಲ. ಓದಿಸಿದರೂ ಪ್ರಯೋಜನವಿಲ್ಲವೆಂದು ಮನದಟ್ಟಾಗಿತ್ತು. ಒಬ್ಬ ಟೌನಿನಲ್ಲಿ ಒಂದು ಹೋಟೆಲು ಬಳಿ ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿದ್ದಾನೆ. ವ್ಯಾಪಾರ ತಕ್ಕ ಮಟ್ಟಿಗೆ ಚೆನ್ನಾಗಿದೆ. ಹೆಂಡತಿ ಮಕ್ಕಳೊಡನೆ 'ಸುಖ'ವಾಗಿದ್ದಾನೆ. ಇನ್ನೊಬ್ಬನೂ ಟೌನಿನಲ್ಲಿ ಯಾವುದೋ ಬ್ಯಾಂಕಿಗಾಗಿ ಅಂಗಡಿಯಿಂದ ಅಂಗಡಿಗೆ ಅಲೆದು ಪಿಗ್ಮಿ ಡಿಪಾಜಿಟ್‌ಗೆ ವಂತಿಕೆ ಸಂಗ್ರಹಿಸುತ್ತಾನೆ. ಅದಕ್ಕೆ ಅವನಿಗೆ ಕಮಿಷನ್ ಸಿಗುತ್ತದೆ. ಜತೆಗೆ ಒಂದು ಸರ್ಕ್ಯುಲೇಶನ್ ಲೈಬ್ರರಿ ಇಟ್ಟುಕೊಂಡಿದ್ದಾನೆ. ತಕ್ಕಮಟ್ಟಿಗೆ ಚೆನ್ನಾಗಿಯೇ ಇದ್ದಾನೆ. ನಾನು, ನನ್ನ ಹೆಂಡತಿ ನಮ್ಮ ಹಳ್ಳಿಯ ಮನೆಯಲ್ಲೇ ಇದ್ದೇವೆ. ಇಬ್ಬರ ಜೀವನಕ್ಕೆ ನನ್ನ ಪಿಂಚಣಿ ಸಾಕಾಗುತ್ತದೆ.

ಹೀಗೆ ಇರುವಾಗ ಒಂದು ದಿನ ನಮ್ಮ ಮನೆಯ ಮುಂದೆ ಒಂದು ದೊಡ್ಡ ಕಾರು ಬಂದು ನಿಂತಿತು. ಅದರಲ್ಲಿಂದ ಒಬ್ಬ ಸಾಧು ಇಳಿದರು. ಕಾರನ್ನು ಕಳಿಸಿ ಸೀದಾ ಒಳಕ್ಕೆ ಬಂದು ನಿಂತರು. ಮಹಾ ತೇಜಸ್ವಿ. ಹಣೆಯ ಮಧ್ಯದಲ್ಲಿ ಒಂದು ದುಂಡನೆಯ ಬಿಳಿಯ ತಿಲಕ. ಅದರ ಮೇಲೊಂದು ಕೆಂಪು ಬೊಟ್ಟು. ನೀಳ ಕೇಶ—ನೀಳ ಗಡ್ಡ—ಮೀಸೆ. ಬಿಳಿಯ ರೇಶಿಮೆಯ ದಟ್ಟಿ ಪಂಚೆ. ಮೊಣಕಾಲಿನಿಂದ ಕೆಳಕ್ಕೆ ಇಳಿದ ರೇಶಿಮೆಯ ಬಿಳಿಯ ಜುಬ್ಬ. ಮೇಲೊಂದು ಬಾದಾಮಿ ಬಣ್ಣದ ರೇಶಿಮೆಯ ಹೊದಿಕೆ. ಅದರ ಮೇಲೆ ಕಾಣುವಂತೆ ಹಾಕಿದ ಕಪ್ಪು ಮಣಿಯ ಸರ. ಕೈಲಿ ಒಂದು ಚಿಕ್ಕ ಬೆಳ್ಳಿಯ ಪೆಟ್ಟಿಗೆ. ಕಣ್ಣಿಗೆ ಚಿನ್ನದ ಕಟ್ಟಿನ ಕನ್ನಡಕ. ಎರಡೂ ಹಸ್ತದ ನಾಲ್ಕು ಬೆರಳುಗಳಿಗೂ ಚಿನ್ನದ ಉಂಗುರಗಳು.

ಸಾಧು ಸೀದಾ ಬಂದವರೇ ನನಗೆ ಸಾಷ್ಟಾಂಗ ನಮಸ್ಕಾರ ಹಾಕಿದರು. ಮೊದಲೇ ಆಶ್ಚರ್ಯದಿಂದ ಬೆಪ್ಪಾಗಿ ನಿಂತಿದ್ದ ನನಗೆ ದಿಕ್ಕೇ ತಪ್ಪಿತು. ಆಗ ಸಾಧು

"ನಾನು ಸರ್ ನಿಮ್ಮ ಸೀನ" ಎಂದರು.

ದಿಟ್ಟಿಸಿ ನೋಡಿದೆ. ಗುರುತು ಸಿಕ್ಕಿತು.

"ಏನಯ್ಯಾ ಇದು ಅವತಾರ ?" ಎಂದ.

"ಎಲ್ಲಾ ನಿಮ್ಮ ಆಶೀರ್ವಾದ" ಎಂದ.

ಅನಂತರ ಪುರಾಣ ಬಿಚ್ಚಿದ. ಬೆಂಗಳೂರಿನ ಅವನ ಶಾಲೆಗಳನ್ನು ಬಾಡಿಗೆಗೆ ಕೊಟ್ಟು, ಫೈನಾನ್ಸನ್ನು ಭಾವಮೈದುನರಿಗೆ ಬಿಟ್ಟು, ಅವರಿಂದ ತಿಂಗಳಿಗೆ ಇಷ್ಟು ಎಂದು ಬಾಡಿಗೆ ಗೊತ್ತು ಮಾಡಿ, ತಾನು ತನ್ನ ಹೆಂಡತಿಯೊಡನೆ ಹಿಮಾಲಯಕ್ಕೆ ಹೋಗುವುದಾಗಿ ಹೇಳಿ, ಮಂಚೇನಹಳ್ಳಿ ಸೇರಿದನಂತೆ. ಅಲ್ಲಿ ಎರಡು ತೆಂಗಿನ ತೋಟ ಕೊಂಡನಂತೆ. ಅನಂತರ ಹಳ್ಳಿಯಲ್ಲಿ ಕೂತು ರಜನೀಶ್, ಮಹೇಶ ಯೋಗಿ ಮತ್ತಿತರ ಆಧುನಿಕ ಸಾಧುಗಳ ಚರಿತ್ರೆ ಓದಿದನಂತೆ.

ಅದರ ಫಲಶ್ರುತಿಯೇ ಅವನ "ಸೀನೂ—ಶಾಂತಿ ಸಿಸ್ಟಮ್ಸ್" ಎಂಬ ಸಂಸ್ಥೆ. ಹದಿನೈದು ದಿನದ ಕೋರ್ಸಂತೆ. ಅವನ "ಧ್ಯಾನ ಯೋಗ" ತರಗತಿಗಳಲ್ಲಿ ತರಬೇತಿ ಪಡೆದರೆ ಹದಿನೈದೇ ದಿನಗಳಲ್ಲಿ ಮನಶ್ಶಾಂತಿ ದೊರಕುತ್ತದಂತೆ. ಅತೀಂದ್ರಿಯ ಜ್ಞಾನ ಲಭಿಸುತ್ತದಂತೆ. ಯಾವ ಕೆಲಸ ಹಿಡಿದರೂ ಜಯವಾಗುತ್ತದಂತೆ. ಹದಿನೈದು ದಿನದ ಈ ತರಬೇತಿಯ ಶುಲ್ಕ ಕೇವಲ ಒಂದು ಸಾವಿರ ರೂಪಾಯಿಯಂತೆ.

ಕಾಲಕ್ಕೆ ಸರಿಯಾಗಿರಲು ಈಚೆಗೆ ಅವನು ವಿಮಾನದಲ್ಲೇ ಸಂಚರಿಸುತ್ತಾನಂತೆ. ಉತ್ತರ ಭಾರತದಲ್ಲಿ ಇವನ ಹೆಸರು ಮನೆ ಮಾತಂತೆ. ಗುಜರಾತಿನ ಸೇಟರೂ, ಮಾರವಾಡಿಗಳೂ, ಸಿಂಧಿಗಳೂ, ಬಿಹಾರಿಗಳೂ, ಬಂಗಾಲಿಗಳೂ ಇವನ ಶಿಷ್ಯರಂತೆ.


ಅಮೆರಿಕಾದ ಜನರು ಇವನು ಎಂದರೆ ಪ್ರಾಣ ಬಿಡುತ್ತಾರಂತೆ. ಹಣದ ಮಳೆಯೇ ಸುರಿಯುತ್ತಿದೆಯಂತೆ.

ಅಲ್ಲಲ್ಲಿ ಕೇಂದ್ರಗಳನ್ನು ಸ್ಥಾಪಿಸಿದ್ದಾನಂತೆ. ಕೇಂದ್ರದ, ರಾಜ್ಯದ ಮಂತ್ರಿಗಳೂ, ಕೈಗಾರಿಕೋದ್ಯಮಿಗಳೂ ಇವನನ್ನು ಗುಟ್ಟಾಗಿ ಕಾಣುತ್ತಾರಂತೆ. ಇವನ ಹೆಂಡತಿ ಶಾಂತಿ ಈಗ "ಮಾತೆ" ಯಂತೆ. ಇವನು "ಸಾಧು ಶ್ರೀನಿವಾಸಾನಂದ" ನಂತೆ.

ಈಗ ದಕ್ಷಿಣದಲ್ಲಿ ಕೋರ್ಸುಗಳನ್ನು ಪ್ರಾರಂಭಿಸಲು, ಕೇಂದ್ರಗಳನ್ನು ಸ್ಥಾಪಿಸಲು ಹೊರಟಿದ್ದಾನಂತೆ.

ಹೊರದೇಶ ಒಂದರ ಸಹಕಾರದಿಂದ ಕೇಂದ್ರದ ಒಬ್ಬ ಪ್ರಖ್ಯಾತ ರಾಜಕಾರಣಿಗಳ ಜತೆಗೂಡಿ ಅಂಡಮಾನಿನಲ್ಲಿ ಒಂದು ಬಂದೂಕಿನ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದುಕೊಂಡಿದ್ದಾನಂತೆ.

"ಅಯ್ಯಾ, ಸಾಧು ಶ್ರೀನಿವಾಸಾನಂದ, ನೀನು ನನ್ನ ಹಳೆಯ ವಿದ್ಯಾರ್ಥಿ ಎಂಬ ಅಭಿಮಾನದಿಂದ ಹೇಳುತ್ತೇನೆ. ಏನು ಬೇಕಾದರೂ ಮಾಡು. ಆದರೆ ಬಂದೂಕಿನ ಕಾರ್ಖಾನೆಗೆ ಮಾತ್ರ ಕೈ ಹಾಕಬೇಡ" ಎಂದು ಹೇಳಿ ಅವನನ್ನು ಬೀಳ್ಕೊಟ್ಟೆ."



ಅಲ್ಲಾಂದ್ರೆ ಹೀಗೆ ಮುಖೇಡಿ ಹಾಗೆ ಕೂತಿರೋ ಬದ್ಲು ಡಕಾಯಿತರನ್ನಾದ್ರು ಹಿಡ್ಕೊಂಡ್ ಬನ್ನಿ ಬಹುಮಾನ ಬರತ್ತೆ.

ಹಲವು ಟಿಪ್ಪಣಿಗಳು

—ಸಿ. ಪಿ. ರಾಜೇಶ್

ಜೀವನ ಇದೊಂದು ರೀತಿಯ ವನ. ಇಲ್ಲಿ ವಾಸಿಸುವ ಪ್ರಾಣಿ ಪಕ್ಷಿಗಳಿಗೆ ಸರಿಯಾದ ಉದ್ದೇಶ ಇಲ್ಲದೆ ಹೋದರೂ ಕೂಡ ವಾಸಕ್ಕಾಗಿ ಕಚ್ಚಾಡುವುದೇ ಜಾಸ್ತಿ. ರಾಜಕಾರಣಿಗಳು ಎಂಬ ಪ್ರಾಣಿಗಳಿಗೆ ಇಲ್ಲಿ ಪ್ರಾಮುಖ್ಯತೆ ಹೆಚ್ಚು ಎಂಬ ವಿಷಯವಂತೂ ಅಕ್ಷರಶಃ ಸತ್ಯ.

ಸತ್ಯ ಇದು ಆಗಾಗ ಜನರ ಬಾಯಲ್ಲಿ ಕೇಳಿಬರುತ್ತಿರುತ್ತದೆ. 'ಎಲ್ಲರೂ ಹೇಳುವ, ಯಾರೂ ಪಾಲಿಸದ', policy ಗಳಲ್ಲಿ ಇದೂ ಒಂದು. ಯಾವಾಗಲೊ ಒಂದೊಂದು ಬಾರಿ ಕಣ್ಣು ಬಿಡುವ ಇದು ಯಾವಾಗಲೂ ನಿದ್ದೆ ಮಾಡುತ್ತಿರುತ್ತದೆ.

ನಿದ್ದೆ ಆಟದ ಸಮಯದಲ್ಲಿ absent ಆಗಿ ಪಾಠದ ಸಮಯದಲ್ಲಿ present ಆಗಿಬಿಡುವ ವಸ್ತು (ಕೆಲವರಿಗೆ). ಮತ್ತೆ ಕೆಲವರಿಗೆ ಇದು excess ಆಗಿದ್ದರೆ ಇನ್ನೂ ಕೆಲವರಿಗೆ ಇದರ shortage ಇರುತ್ತೆ. **ಉದಾ** ನಮ್ಮ ಅಜ್ಜಿ ಹನ್ನೆರಡು ವರ್ಷದ ಹಿಂದೆ ಸಮುದ್ರದ ಕೆಳಗೆ ಮಲಗಿದವರು ಈವರೆಗೂ ಎದ್ದೇ ಇಲ್ಲ. ಮಲಗುವ ಅಭ್ಯಾಸ ಒಳ್ಳೆಯದೇ ಆದರೂ ಶಾಶ್ವತವಾಗಿ ಮಲಗುವುದು ಅಷ್ಟಾಗಿ ಒಳ್ಳೆಯದಲ್ಲ. ಇದು ಸಿಗದಿದ್ದಲ್ಲಿ ಮದ್ಯಪಾನದ ಮೊರೆ ಹೋಗುವುದೇ ಲೇಸು.

ಮದ್ಯಪಾನ ದೇವತೆಗಳ dictionary ಯಲ್ಲಿ ಇದಕ್ಕೆ ಸುರಾಪಾನ ಎಂಬುದು ಪರ್ಯಾಯ ಪದ. ಧೂಮಪಾನ, ಇಸ್ಪೀಟು, ಜೂಜು, ರೇಸು ಮುಂತಾದ ಪದಗಳಿಗೂ ಇದಕ್ಕೂ close association ಇದೆ. ಇದು ಅಭ್ಯಾಸವಾದರೆ ಜಾರು ಬಂಡೆಯ ಮೇಲೆ ಕುಳಿತಂತೆ ಆಗುತ್ತದೆ. ಇದರ ಪರಿಣಾಮ ಅರಿವಾಗುವುದು ನೆಲ ಕಚ್ಚಿದಾಗ ಮಾತ್ರ. ಸಭೆ, ಸಮಾರಂಭಗಳಲ್ಲಿ ಗೌರವ ಹೆಚ್ಚಾಗಬೇಕಾದರೆ ಇದರ ಅಭ್ಯಾಸ ಅತ್ಯವಶ್ಯ.

ಗೌರವ ಇದು ಭಯದ product ಭಯ present ಆಗಿರುವಲ್ಲಿ 90per sent ಇದೂ present ಆಗಿರುತ್ತೆ. ಇದನ್ನು ಪಡೆದುಕೊಳ್ಳುವ ವ್ಯಕ್ತಿ ಇಲ್ಲವಾದಲ್ಲಿ ಇದೂ absent ಆಗುತ್ತೆ. ಜೀವಂತವಾಗಿದ್ದಾಗಿಗಿಂತಲೂ ಸತ್ತಾಗಲೇ ಇದು ಸಿಗುವುದು ಹೆಚ್ಚು. ಇವತ್ತಿನ ಪ್ರಪಂಚದಲ್ಲಿ ಇದರ scarcity ಹೆಚ್ಚಾಗಿದೆ.

ಪ್ರಪಂಚ ಇದರ ಬಗ್ಗೆ ಹೆಚ್ಚಿನ details ಬೇಕಾದರೆ ಇದನ್ನು ಸೃಷ್ಟಿಸಿದ ದೇವರನ್ನು ಕೇಳಬೇಕು.

ದೇವರು ಇವನ actual ವಿಳಾಸ ಯಾರಿಗೂ ತಿಳಿದಿಲ್ಲ. ಬೆಂಕಿ (ಮಂಗಳಾರತಿ) ಅಂದರೆ ಇವನಿಗೆ ಬಲು ಇಷ್ಟ. ಸ್ವಲ್ಪ ತುಂಟನಾದ ಕಾರಣ ಗುಡಿಗಳಲ್ಲಿ ಇವನನ್ನು ಬಂಧಿಸಿರುತ್ತಾರೆ. ಇವನು ಇದ್ದಾನೆ ಎನ್ನುವವರ ತಲೆ ಸರಿ ಇಲ್ಲ ಎಂದು ಕೆಲವರ ಅಭಿಮತ. ವೈಜ್ಞಾನಿಕ ಮನೋಭಾವ ಇರುವ ವ್ಯಕ್ತಿ ಎನಿಸಿಕೊಳ್ಳಬೇಕಾದರೆ ಇವನು ಇಲ್ಲ ಎಂದು ವಾದಿಸಬೇಕು.

ವಿಜ್ಞಾನ : ಉದ್ಧಾರದ ಹೆಸರಿನಲ್ಲಿ ನಾಶದತ್ತ ಕೊಂಡೊಯ್ಯುತ್ತಿರುವ ವಾಹನ. ಇದರ ಚಾಲಕ ಮನುಷ್ಯನೇ ಆದರೂ brake fail ಆಗಿರುವ ಕಾರಣ ಅದನ್ನು control ಮಾಡುವ ಶಕ್ತಿ ಕಳೆದುಕೊಂಡಿದ್ದಾನೆ. Accident ಆಗುವ ಸಮಯ ಬಹಳ ದೂರವಿಲ್ಲ ಎನ್ನಬಹುದು.

ಆ್ಯಕ್ಸಿಡೆಂಟ್ ಇದು ಶಂಕರನಾಗ್ ನಿರ್ದೇಶಿಸಿದ ಚಿತ್ರದ ಹೆಸರು. ಇದಕ್ಕೆ ರಾಷ್ಟ್ರ ಪ್ರಶಸ್ತಿ ದೊರೆತಿದೆ. ಇವೊತ್ತಿನ ಪ್ರಪಂಚದಲ್ಲಿ ಇದು ಆಗದೆ ಇರುವ ಸ್ಥಳವೇ ಇಲ್ಲ. ಕೆಲವೊಮ್ಮೆ ಇದು ನಡೆದಾಗ ಕೆಳಗೆ ಬೀಳುವ ಮನುಷ್ಯರು ಮೇಲೇಳುವುದೇ ಇಲ್ಲ.

ಸಾವು · ಮೇಲೆ ಹೇಳಿದ phenonenaದ ಹೆಸರು ಇದು. ಇದನ್ನು ಅಪ್ಪಿದವರನ್ನು ದೈವಾಧೀನರಾದರು, ಶಿವೈಕ್ಯರಾದರು, ಶಾಶ್ವತವಾಗಿ ನಿದ್ರಿಸಿದರು, ಪರಲೋಕ ಯಾತ್ರೆಗೆ ಹೊರಟರು, ಇಹಲೋಕ ತ್ಯಜಿಸಿದರು, ನೆಗೆದು ಬಿದ್ದರು, ಮರಣ ಹೊಂದಿದರು, ಗೊಟಕ್ ಆದರು ಎಂದು ಮುಂತಾಗಿ ಹೇಳುತ್ತಾರೆ.

ಕೂತುಕೊಳ್ಳಿ ಬನ್ನಿ ರಾಯರೇ. ಈಗಿನ ಕಾಲದಲ್ಲಿ ಎಂತೆಂಥೊರೋ ಮೂರೇ ತಿಂಗಳಲ್ಲಿ ಮೂಲೇಲಿ ಕೂತರು, ಬನ್ನಿ ಬನ್ನಿ ಹಸೆ ಮೇಲೆ ಕೂಡಿ ಎಂದು ಪುರೋಹಿತರು ಕರೆದರಂತೆ.

—ಧಳಕು ತುಣುಕು

ವಕ್ರ ದೃಷ್ಟಿ

—ಅಮೋಲಕ

ರಾಜ್ಯದಲ್ಲಿ ಡಕಾಯತಿ ಮೂರು ದಿನಕ್ಕೊಂದು ಇದ್ದದ್ದು ದಿನಕ್ಕೆ ಮೂರಾಗಿದೆ

ಹಗಲು ವಿರೋಧಿಗಳ ಕಾಟ. ಒಳಗೆ ಮುಸುಕಿನ ಗುದ್ದು ಕೊಡುವ ಗೆರಿಲ್ಲಾಗಳ ಕಾಟ. ರಾತ್ರಿ ಡಕಾಯಿತರ ಕಾಟ. ಅಂತೂ ಕಾಟವೇ ಕಾಟ.

ಸರ್ಕಾರ ಹ್ಯಾಗೆ ಹಾಯಾಗಿರಬೇಕೂಂತೀನಿ ? ತಲೆ ಇದ್ದವರಿಗೆ ತಲೆ ಬಿಸಿ. ಇಲ್ಲದೋರಿಗೆ ಮೈ ಬಿಸಿ.

* * * *

"ಒಂದೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ ಸಿಬ್ಬಂದಿ, ವಾಹನ. ವಾರದಲ್ಲಿ ಡಕಾಯಿತಿ ತಡೆ ದಳ ಇಲಾಖೆಗೆ ಕಾಯಕಲ್ಪ."—ಸುದ್ದಿ.

ಇಷ್ಟ್ಯಾಕೆ ತಲೆ ಖರ್ಚು ಮಾಡಿ beating about the bush ಮಾಡಬೇಕು? Strike a deal with the dacoits. ಒಂದೂವರೆ ಕೋಟಿ ಎಂದರೆ 150 ಲಕ್ಷ. ತಿಂಗಳಿಗೆ 30 ಲಕ್ಷ. ದಿನಕ್ಕೆ ಒಂದು ಲಕ್ಷದಂತೆ ಐದು ತಿಂಗಳಿಗೆ ಸಾಕು. ಡಕಾಯತರನ್ನು ಕರೆಸಿ ಅಥವಾ open invitation ಕೊಟ್ಟು, ದಿನಾ ನಿಮಗೆ ಒಂದು ಲಕ್ಷ ಕೊಡ್ತೀವಿ. ನೀವೂ ಹಾಯಾಗಿ ಮಲಗಿ. ನಾವೂ ಮಲಗ್ತೀವಿ ಐದು ತಿಂಗಳು. ಅನಂತರ ಹೊಸ ಬಜೆಟ್ಟು ಬರುತ್ತೆ. ಪುನಃ ನಿಮಗೆ provision ಮಾಡ್ತೀವಿ. ಬೇಕಾದರೆ ಸಂದಾಯದಲ್ಲಿ ಬಡ್ತಿ ಕೊಡ್ತೀವಿ ಎಂದು ಹೇಳಬಹುದಲ್ಲ? ಇದರಿಂದ ಉಭಯತಾಪಿ ಅನುಕೂಲ.

* * * *

ದಿನಕ್ಕೆ ಲಕ್ಷಕೊಟ್ಟರೂ ಅವರ ಕಸಬು ಬಿಡದಿದ್ದರೆ? ಕಾಸೂ ಹಾಳು, ತಲೆಯೂ ಬೋಳು ಆದರೆ? ಡಕಾಯತರು ಎಲ್ಲರ ಹಾಗಲ್ಲ. ನಿಯತ್ತಿನ ಜನ. ನಿಯತ್ತು ಇಲ್ಲದಿದ್ದರೆ ಅವರು ಇಷ್ಟು ಚಳ್ಳೆ ಹಣ್ಣು ತಿನ್ನಿಸ್ತಿರಲಿಲ್ಲ. ಆದ್ದರಿಂದ ಯಾರನ್ನು ನಂಬದಿದ್ದರೂ ಅವರನ್ನ ನಂಬಬಹುದು" ಎನ್ನುತ್ತಾರೆ ಅನುಭವಿಕರೊಬ್ಬರು.

* * * *

ಅಧಿಕಾರಿಗಳಿಗೆ ಪ್ರನಃ ಆರು ತಿಂಗಳ ನೋಟೀಸು ಕೊಟ್ಟಿದ್ದಾರಂತಲ್ಲ ? "ಇನ್ನೂ ಆರು ತಿಂಗಳಲ್ಲಿ ಭ್ರಷ್ಟಾಚಾರ ನಿಂತು, ಆಡಳಿತದಲ್ಲಿ ಶಿಸ್ತು ಬರಬೇಕು. ಇಲ್ಲದಿದ್ದರೆ ನೋಡಿ......ನಾನು ಎದ್ದರೆ ಆಳಲ್ಲ ! ಎಂಬೋ ಅರ್ಥವಲ್ಲಿ ಜೋರಾಗಿ ಹೇಳಿದ್ದಾರಂತೆ.

ಅಂಧರೆ "ಆರು ತಿಂಗಳವರೆಗೆ ನಿರಾಳವಾಗಿ ಈಗಿರೋ ಹಾಗೆ ಇರಬಮುದು ಎಂದೋ ? ಅಥವಾ ಇದರ ಒಳ ಅರ್ಥ ಆರು ತಿಂಗಳು ತಿನ್ಕೊಂಡು, ಉಣ್ಕೊಂಡು ಮಾಡಿಕೊಳ್ಳೋ ಅಷ್ಟು ಮಾಡಿಕೊಳ್ಳಿ, ಅನಂತರ ಸಿಕ್ಕಿ ಬಿದ್ದರೆ ನಾನು ಜವಾಬ್ದಾರ ನಲ್ಲ'' ಎಂತಲೋ ?

*　　*　　*　　*

ಅದೇನೇ ಇರಲಿ. ಆರೇ ತಿಂಗಳು ಯಾಕೆ ಗಡವು ಹಾಕಿದರು? ಇದರಲ್ಲೇನೋ ಒಳಗುಟ್ಟು ಇದೆ ಎಂದು ನಮ್ಮ idlers parlour ಪುಟ್ಟಣ್ಣನ ಅಂಬೋಣ.

ಒಳಗುಟ್ಟು ಎಂದರೆ "ಆರು ತಿಂಗಳ ನಂತರ ನಾನೇ ಹಾರಿದರೆ ?........." ಎಂತಲೇ "ಎಲ್ಲಿಗೆ?'' ಎಂಬುದು ಯಕ್ಷ ಪ್ರಶ್ನೆ.

ಈಗಿನ ವಿದ್ಯಮಾನಗಳನ್ನು ನೋಡಿದರೆ "I smell a rat ಅಂತಾನೆ ಪುಟ್ಟಣ್ಣ. ಅಹುದಾದರಹುದೆನ್ನಿ.

''ಅಲ್ಲಾ ಆರೇಕೆ ? ಒಂಭತ್ತೇ ಆಗ್ಲಿ'' ಅಂತೀರೋ ? ಇದಕ್ಕೆ ಮೊದಲೇ ಮೂರು ತಿಂಗಳು ಗಡವುಕೊಟ್ಟಿದ್ದಾರಲ್ಲಾ ? ಜ್ಞಾಪಕವಿಲ್ಲವೆ ? ಅಲ್ಲಿಗೆ ಆರೋ ಮೂರೂ ಒಂಭತ್ತಾಗುತ್ತಲ್ಲ ! ಅನಂತರ ಹುಟ್ಟೋದು ಗಂಡೋ, ಹೆಣ್ಣೋ ನೋಡೋಣ.

"Abortion ಆದ್ರೆ'' ? ಅಂತೀರಾ ? ಹೇಳೋಕೆ ಬರೋಲ್ಲ.

*　　*　　*　　*

"ನಾನು ಎದ್ದರೆ ಆಳಲ್ಲ......'' ಎಂದಾಗ ಒಂದು ಕಥೆ ನೆನಪಿಗೆ ಬರುತ್ತೆ. ಯಾವನೋ ಒಬ್ಬನ್ನ ಹೊಲ ಕಾಯೋಕೆ ನೇಮಿಸಿದ್ದರಂತೆ. ಅವನು ಹೊಲದಲ್ಲಿ ಹಾಕಿದ ಅಟ್ಟದ ಮೇಲೆ ಮೈತುಂಬಾ ಕಂಬಳಿ ಹೊದ್ದು ಕೂತಿದ್ದನಂತೆ. ಬೆಳೆ ಕದಿ ಯೋಕೆ ಬಂದ ಕಳ್ಳರಿಗೆ "ಸುಮ್ನೆ ಹೋಗ್ತೀರೋ ಇಲ್ಲವೊ. ನಾನು ಎದ್ದು ಬಂದರೆ ನೋಡಿ. ಎದ್ದರೆ ಆಳಲ್ಲ" ಎಂದು ಕೂಗುತ್ತಿದ್ದನಂತೆ. ಕೂಗಿಗೆ ಹೆದರಿ ಕಳ್ಳರು ಓಡಿ ಹೋಗುತ್ತಿದ್ದರಂತೆ. ಇದು ಹೀಗೇ ನಡೀತಾ ಇದ್ದಾಗ ಒಂದುದಿನ ಒಬ್ಬ ಜಾಣ ಕಳ್ಳ ಹಿಂದಿನಿಂದ ಬಂದು ಕಂಬಳಿ ಹಾರಿಸಿದನಂತೆ. ನೋಡಿದರೆ ಕೂಗ್ತಾ ಇದ್ದ ಕಾವಲು ಕಾಯೋನಿಗೆ ಕಾಲೇ ಇಲ್ಲ.

ಟಿ. ವಿ. ರಾಮಾಯಣ

—ಲೋಕನಾಥ ದೀಕ್ಷಿತ್

ಅಂದು ಭಾನುವಾರ ಫ್ಯಾಕ್ಟರಿಯಲ್ಲಿ ಕೊಟ್ಟ ಬೋನಸ್ ದುಡ್ಡಿನಿಂದ ಟಿ.ವಿ. ತೆಗೆದುಕೊಂಡಾಗಿತ್ತು. ಆದ್ದರಿಂದ ದುಡ್ಡು ಮಿಕ್ಕಿ ಅದನ್ನು ಖರ್ಚು ಮಾಡುವ ಬಗ್ಗೆ ತಲೆ ಕೆಡಿಸಿಕೊಳ್ಳುವ ಪ್ರಮೇಯ ಇರಲಿಲ್ಲ.

"ಈಗ ಟಿ.ವಿ. ಮನೆಗೆ ಬಂದ ಮೇಲೆ ಮುಂದೆ ಏನು ಮಾಡಬೇಕು ಅಂತಾ ತೋಚೋದೆ ಇಲ್ಲಾ ಅಂದೆ.

"ನಿಮ್ಮ ತಲೆ" ಅಂದಳು ಅವಳು. ನಾನು ಅವಳ ಮುಖ ನೋಡಿದೆ.

"ಏನು ಮುಖ ನೋಡುತ್ತೀರಾ. ಹೋಗ್ರೀ, ಸ್ನಾನ ಮಾಡಿ ಬನ್ನಿ" ಅಂತ ಆಜ್ಞೆ ಇತ್ತಳು. ನಾನು ಯಾವತ್ತೂ ಅರ್ಧಾಂಗಿ ಹೇಳಿದ ಮಾತಿಗೆ ಎದುರು ಉತ್ತರ ಕೊಟ್ಟವನಲ್ಲ. ಆದರೆ ಇಂದು ಧೈರ್ಯ ಮಾಡಿ,

"ಇವತ್ತು ಭಾನುವಾರ ಅಲ್ಲವೇನೇ...?"

"ಅದಕ್ಕೇ ಹೇಳಿದ್ದು ಬೇಗ ಸ್ನಾನ ಮಾಡೀ ಅಂತಾ"

"ಯಾರಾದ್ರು ನಿನ್ನ ತಮ್ಮ ಅಥವಾ ಅಪ್ಪ ಬರ್‍ತಾರೆಯೇ?"

"ರೀ—ನಿಮಗೇ ತಲೆ ಇದೆ ಹೊರತು ಅದರಲ್ಲಿ ಬುದ್ಧಿ ಇಲ್ಲಾರೀ"

"ಗೊತ್ತು ಕಣೇ. ಅದಕ್ಕೇ ನಾ ನಿನ್ನ ಮದುವೆ ಆಗಿದ್ದು.

"ರೀ– ಸುಮ್ಮನೆ ಹರಟುತ್ತೀರೋ ಅಥವಾ ಸ್ನಾನ ಮಾಡಿಕೊಂಡು ಬರ್ತೀರೋ?" ಅಂತ ಪೊರಕೆ ತೊಗೊಂಡಿದ್ದಳು.

ನಾನು ಹೆದರಿದಾಗ ನಿಮಗಲ್ಲಾರೀ, ಹಾಲು ಗುಡಿಸಬೇಡವೇ? ಅಂತ ನಕ್ಕಿದ್ದಳು.

"ನೋಡೀ. ನಲವತ್ತು ವರ್ಷ ಆದರೂ ನಿಮ್ಮ ಅಪ್ಪ ಶಿಸ್ತು ಕಲಿಸಿಲ್ಲಾರೀ"... ಅಂತ ನನ್ನನ್ನ ಸ್ನಾನಕ್ಕೆ ಅಟ್ಟಿದಳು.

ನಾನು ತಡ ಮಾಡದೆ ಇದ್ದ ಮೂರು ಉದ್ಧರಣೆ ನೀರಿನಲ್ಲಿ ಸ್ನಾನ ಮಾಡಿ ಬಂದೆ.

*　　　*　　　*　　　*

ಹಾಲ್ ಚೊಕ್ಕಟವಾಗಿತ್ತು. ಟಿ.ವಿ. ಮುಂದಿನ ಬ್ಲೂ ಷೀಲ್ಡ್ ಒರೆಸುತ್ತಿದ್ದಳು. ಒಂದು ನಿಮಿಷ ದಂಗು ಬಡಿದಂತೆ ನಿಂತೆ.

"ನಿನಗೇನೇ ಬಂತು ಇವತ್ತೂ? ಪ್ರತಿ ಭಾನುವಾರ ನಾನು ಎದ್ದು ಕಾಫಿ ಕಾಸಿ ಕೊಟ್ಟರೇನೆ ಏಳುತ್ತಿದ್ದ ನೀನು ಇವತ್ತು—ಭಾನುವಾರ—ಎಂದ್ದು ಸ್ನಾನ ಮಾಡಿ... ದೇವರಿಗೆದೀಪ ಹಚ್ಚಿ—ಮನೆ ನೀಟ್ ಮಾಡಿದೀಯಾ? ಇವತ್ತಾದರೂ ಕಾಫಿ ಗೀಫಿ ಏನಾದರೂ ಕೊಡ್ತಿಯೋ ಇಲ್ಲವೋ?"

"ನೋಡೀ. ಬೆಂಗಳೂರಿಗೆ ಟಿ.ವಿ. ಬಂದು ನಾಲ್ಕು ವರ್ಷದ ಮೇಲೆ ಮನೆಗೆ ಟಿ.ವಿ. ತಂದಿದೀರಾ. ನೀವು ಟಿ.ವಿ. ತಂದ ಹೊತ್ತೋ ಅಥವಾ ಟಿ.ವಿ. ಯವರಿಗೇ ಬುದ್ಧಿ ಬಂದೋ ರಾಮಾಯಣ ಹಾಕ್ತಿದಾರೆ" ಅಂತ ಬಿಸಿ ಬಿಸಿ ಕಾಫಿ ಲೋಟ ಮುಂದೆ ಹಿಡಿದಳು.

"ಅದಕ್ಕೆ ನಾನೇನು ಮಾಡ ಬೇಕು? ನಿಂದು ಒಳ್ಳೆ ರಾಮಾಯಣ ಆಯಿತಲ್ಲೇ. ವಾರ ಪೂರ್ತಿ ದುಡಿದ ನಮಗೆ ರೆಸ್ಟ್ ತೆಗೆದುಕೊಳ್ಳಲಿ ಅಂತಾ ಭಾನುವಾರ ಒಂದು ದಿನ ರಜ ಕೊಡುತ್ತಾರೆ. ಇವತ್ತೂ ನೆಮ್ಮದಿಯಾಗಿ ನಿದ್ರೆ ಮಾಡೋಕೆ ಬಿಡಬಾರದೇ?"...

"ನೋಡೀ. ನಿಮಗೆ ದೇವರಿಲ್ಲಾ, ದಿಂಡರಿಲ್ಲ. ದೇವಸ್ಥಾನಕ್ಕೆ ಜನ್ಮದಲ್ಲಿ ಕಾಲಿಟ್ಟೋರಲ್ಲ. ಮನೆಗೇ ಟಿ.ವಿ. ಮೂಲಕ ಬಂದು ರಾಮಾಯಣ ತೋರಿಸಿದರೂ ನೋಡಬೇಡವೇ?"

"ಅದಕ್ಕೆ ನಾನು ಯಾಕೆ ಸ್ನಾನ ಮಾಡಬೇಕೂ?"

"ರೀ. ಉತ್ತರದಲ್ಲಿ ರಾಮಾಯಣ ಬರುವ ಹೊತ್ತಿಗೆ ಟಿ.ವಿ.ಗೆ ದೀಪ ಹಚ್ಚಿರುತ್ತಾರಂತೆ. ನೀವೂ ವಾರಕ್ಕೆ ಒಂದು ದಿನ ಟಿ.ವಿ. ಬರುವುದಕ್ಕೆ ಮುಂಚೆ ಸ್ನಾನಾನಾದರೂ ಮಾಡಬೇಡವೇನ್ರೀ?"...ಅಂತಾ ಕೊಂಕಿದಳು.

"ಈ ಟಿ.ವಿ. ರಾಮಾಯಣನೂ ಬರುತ್ತೊ?– ನಾನು ಬರೀ... ಶುಕ್ರವಾರ ರಾತ್ರಿ ವಯಸ್ಕರ ಸಿನಿಮಾ ಮಾತ್ರಾ ಅಂತ ತಿಳಿದಿದ್ದೆ" ಅಂತ ನನ್ನ ಜ್ಞಾನ ಪ್ರದರ್ಶಿಸಿದ್ದೆ.

"ನಿಮಗೆ ಯಾವಾಗಲೂ ಅದೇ ಚಿಂತೆ" ಅಂದು ಅಡುಗೆ ಮನೆಗೆ ಹೋದಳು.

ನಾನು ಶರ್ಟ್ ಹಾಕಿಕೊಂಡು ಒದ್ದೆ ತಲೆ ಒರೆಸಿಕೊಳ್ಳುತ್ತಾ ಕುರ್ಚಿ ಮೇಲೆ ಕುಳಿತೆ.

* * * *

"ಸಾರ್... ಸಾರ್..." ಕೂಗುತ್ತಾ ಕಾಲಿಂಗ್ ಬೆಲ್ ಬಾರಿಸಿದ.

"ಏನಪ್ಪಾ ಬೇಕೂ?

"ನಂಬರ್ ಅರವತ್ತು ನಾಲ್ಕು ಇದೇನಾ ಸಾ..."

"ಹೌದೂ"...

"ನಿಮ್ಮ ಮೀಟರ್ ನೋಡಬೇಕಾಗಿತ್ತು."

"ಏನು ಮೀಟರಪ್ಪಾ...ನೀರಿಂದೋ — ಎಲೆಕ್ಟ್ರಿಕ್ಕಿಂದೋ?"

"ಅದೇ ಸಾ...ಎಲೆಕ್ಟ್ರಿಕ್ಕಿಂದೂ..."

"ಇಲ್ಲಿದೆ ನೋಡಪ್ಪಾ" ನನಗೆ ಯಾವ ಸಾಲಗಾರ ಮನೆಯ ಹತ್ತಿರ ಬಂದರೂ ಸಬೂಬು ಹೇಳಬಲ್ಲೆ. ಆದರೆ ಈ ಎಲೆಕ್ಟ್ರಿಕಿನ ಜನ ಬಂದರೆ ಬಾಯಿ ತೊದಲುವುದು ಜಾಸ್ತಿ.

ನಾನು ಪ್ರತಿ ತಿಂಗಳು ಸರಿಯಾಗಿ ಬಿಲ್ ಕಟ್ಟಿದೇನೆ ಅಂತ ಹಳೆ ಬಿಲ್ಲುಗಳ ಕಡತ ತೋರಿಸಿದೆ.

"ಗೊತ್ತೂ ಸಾ ಎಂಬತ್ತ ನಾಲ್ಕು ಎಂಬತ್ತೈದರಲ್ಲಿ ನಿಂ ಬಾಕಿ ಸಾವಿರ ರೂಪಾಯಿ ಇದೆ"

"ಎಂಬತ್ತ ನಾಲ್ಕು ಎಂಬತ್ತೈದರಲ್ಲಿ ಈ ಮನೆಯಲ್ಲೇ ಇರಲಿಲ್ಲವಲ್ಲಾ"

"ಅದಕ್ಕೆ ನಾನೇನು ಮಾಡಲಿ ಸ್ವಾಮೀ. ರೂಲ್ಸು ಅಂದರೆ ರೂಲ್ಸು—ರೆಗ್ಯು ಲೇಷನ್ ಅಂದರೆ ರೆಗ್ಯುಲೇಷನ್" ಅಂತ ಕೇಂದ್ರದ ಮಂತ್ರಿಯ ತರಹ ವ್ಯಾಖ್ಯಾನ ಮಾಡಿದ್ದ.

"ಅಲ್ಲಪ್ಪಾ—ಇವತ್ತು ಭಾನುವಾರ. ರಾಮಾಯಣ ಬೇರೆ ಬರುತ್ತೇ... ನೋಡು, ನಾನು ಮನೆ ಓನರ್ ಹತ್ತಿರ ಮಾತಾಡಿ ಆಮೇಲೆ ಆ ಸಾವಿರ ರೂಪಾಯಿ ಕಟ್ಟುತ್ತೇನೆ"

"ಸಾ...ನೀವು ಉಂಟು, ನಿಮ್ಮ ಓನರ್ ಉಂಟು. ನೀವು ಓನರ್ ಹತ್ರ ಮಾತಾಡಿಕೊಂಡು ಬರುವ ಅಷ್ಟು ಹೊತ್ತು ಕಾಯಕ್ಕೆ ಆಯ್ತದಾ? ನಿಮ್ಮದೊಳ್ಳೆ ರಾಮಾಯಣ ನಮಗೆ. ದುಡ್ಡು ಕಟ್ಲಿಕ್ಕೆ ಆಗೋದಿಲ್ಲಾ. ಟಿ.ವಿ. ಬೇರೆ ಬೇಕಂತೆ ಮನೆಗೆ" ಎಂದು ಗೊಣಗಿಕೊಳ್ಳುತ್ತಾ ಸರಸರ ಹೋಗಿ, ಹಳೆ ಏಣಿ ಮೇಲೆ ಸರಾಗ ವಾಗಿ ಹತ್ತಿ ಫ್ಯೂಸ್ ಕಿತ್ತು ತೆಗೆದುಕೊಂಡು ಹೋದ.

"ಏನ್ರೀ—ಕರೆಂಟೇ ಇಲ್ವಲ್ರೀ" ಅಂದಳು ಅವಳು.

"ಅದು ಏನೋ ಹಳೆ ಬಾಕಿ ಅಂತೆ. ಡಿಸ್‌ಕನೆಕ್ಟ್ ಮಾಡಿ ಹೋದ"...ಅಂತ ಅಪರಾಧಿಯಂತೆ ನಿಂತೆ.

"ನೀವು ಯಾವಾಗಲೂ ಹೀಗೆ. ಮನೆಯಲ್ಲಿ ಟಿ.ವಿ. ಇದ್ದರೂ ಎದುರು ಮನೆಗೆ ಹೋಗಿ ಟಿ.ವಿ. ನೋಡೋ ಪರಿಸ್ಥಿತಿ. ಇದು ಒಳ್ಳೇ ರಾಮಾಯಣ ಅಂತ ಗೊಣಗಿ ಒಳ್ಳೆ ಸೀರೆ ಸುತ್ತಿಕೊಂಡು ಎದುರು ಮನೆಗೆ ಹೋದಳು.

ನಾನು ಎಲೆಕ್ಟ್ರಿಕ್ ಕಂಬ ನೋಡುತ್ತಾ ನಿಂತೆ.

ಶನಿಯೊಂದು ಹತ್ತಿಹುದು ನಿಮ್ಮ ಬೆನ್ನ
ಎಂದು ಗಂಡನಿಗೆ ಜೋಯಿಸರು ಹೇಳ್ದಾಗ
ಚೀರಿ ಬೈದಳೋ ಆಕೆ ಮಂಕಜ್ಜ

—ಥಳಕು–ತುಣುಕು

ಓದುಗರ ಪ್ರತಿಕ್ರಿಯೆ

ಅಪರಂಜಿಯ ಹುಟ್ಟಿದ ಹಬ್ಬಕ್ಕೆ ನಮ್ಮ ಅತ್ಯಂತ ಪ್ರೀತಿಯ ಶುಭಾಶಯಗಳು. ಅಪರಂಜಿಯೊಡನೆ ನಮ್ಮ ನಂಟು ಅವಳ ತಾಯಿಯಾದ ಕೊರವಂಜಿಯ ಕಾಲ ದಿಂದಲೂ ನಡೆದುಬಂದಿದೆ. ಅಪರಂಜಿಯ ಜನ್ಮ ನಮ್ಮ ಆ ನಂಟಸ್ತಿಕೆಯ ಪ್ರೀತಿಯ ಬಾಂಧವ್ಯವನ್ನು ಜಾಗೃತಗೊಳಿಸಿದೆ. ಅವಳ ಪುಟ್ಟ ಹೆಜ್ಜೆಯ ಪ್ರಗತಿ ಪಥವನ್ನು ಪ್ರೇಮದಿಂದ ಎದುರುನೋಡುತ್ತಿದ್ದೇನೆ.

ಬೆಂಗಳೂರು ಶೀಲಾ ರಾವ್

ಪುರಾಣದ ಪುಣ್ಯ ಕಥೆಗಳು ಚೆನ್ನಾಗಿ ಮೂಡಿಬರುತ್ತಿದ. ಪ್ರತಿ ತಿಂಗಳೂ ತಪ್ಪದೆ ಪ್ರಕಟಿಸಿ. ಉಳಿದ ಬರಹಗಳೂ ಚೆನ್ನಾಗಿವೆಯಾದರೂ, ಬರಹಗಾರರಲ್ಲಿ ವೈವಿಧ್ಯತೆ ಕಂಡುಬರುತ್ತಿಲ್ಲ. ಬರೆಯುತ್ತಿರುವ ಕೆಲವೇ ಲೇಖಕರ ವಸ್ತು ನಿರ್ವಹಣೆಯ ರೀತಿ ಏಕತಾನತೆಯಿಂದ ಕೂಡಿದೆ ಎನಿಸುತ್ತಿದೆ. ಹೊಸ ವಿಷಯಗಳ ಹೊಸ ಲೇಖಕರಿಗೆ ಅವಕಾಶ ಕೊಡಬಹುದೆನಿಸುತ್ತದೆ.

ಚಿಕ್ಕಮಗಳೂರು ಕೆ. ಪಿ. ಸತ್ಯನಾರಾಯಣ

ಈ ತಿಂಗಳ ಅಪರಂಜಿಯಲ್ಲಿ ಉತ್ತಮ ಲೇಖನಗಳಿದ್ದವು. ಧನ್ಯವಾದಗಳು.

ಅಪರಂಜಿಯ ಮುಖ ಪುಟ ವಿನ್ಯಾಸ ಆಕರ್ಷಕವಾಗಿರಬೇಕು. ಇದಕ್ಕಾಗಿ ನೀವು ಸುಂದರವಾದ ತಾರೆಯರ ಚಿತ್ರ ಬಳಸಬಹುದು. ಅಥವಾ ಅಪರಂಜಿಯ ಹಾಸ್ಯಕ್ಕೆ ತಕ್ಕಂತೆ ಸೊಟ್ಟ ಮುಖದ ತಾರೆಯರ ಚಿತ್ರಗಳನ್ನು ಪ್ರಕಟಿಸಬಹುದು. ಸಿನಿಮಾ ತಾರೆಯರ ಫೋಟೋಗಳು ನಿಮಗೆ ಅಲರ್ಜಿಯಾದರೆ ರಾಜಕಾರಣಿಗಳ ವ್ಯಂಗ್ಯ ಚಿತ್ರಗಳನ್ನು ಅಥವಾ ಅಪರಂಜಿಯಲ್ಲಿನ ವ್ಯಂಗ್ಯ ಚಿತ್ರಗಳನ್ನು ಬಣ್ಣದಲ್ಲಿ ಮುದ್ರಿಸಬಹುದು.

ಈಗ ಅಪರಂಜಿಯ ವಿನ್ಯಾಸ ಸಹಕಾರಿ ಸಂಘಗಳ ವಾರ್ಷಿಕ ಲೆಕ್ಕಪತ್ರದಂತೆ ಕಾಣುತ್ತದೆ. ಆದುದರಿಂದ ಉತ್ತಮ ಲೇಖನಗಳ ಜೊತೆಗೆ ಲೇಖನಕ್ಕೆ ಹೊಂದುವ ರೇಖಾಚಿತ್ರಗಳನ್ನು ಪ್ರಕಟಿಸಿದರೆ ಕಣ್ಣಿಗೆ ಸಂತೋಷಮಯವಾಗಿರುತ್ತದೆ. ಲೇಖನ ವ್ಯಕ್ತಪಡಿಸಲಾಗದ ಭಾವನೆಯನ್ನು ಒಂದು ಹಾಸ್ಯ ರೇಖೆಯಿಂದ ವ್ಯಕ್ತಪಡಿಸ ಬಹುದು.

ತಿಂಗಳಿಗೊಂದು ರಾಜಕೀಯ ಘಟನೆಗಳ ವಿಡಂಬನಾತ್ಮಕ ಲೇಖನ ಇದ್ದರೆ ಉತ್ತಮ. ಅಂತಹ ಲೇಖನಗಳಿಗೆ ವಿಶಿಷ್ಟ ಸ್ಥಾನವಿದೆ.

ಬರೆ ಕಾಲ್ಪನಿಕ ಕೆಲಸದ ಆಳು ಅಥವಾ ಬೆಪ್ಪು ಸ್ನೇಹಿತರನ್ನು ಕುರಿತ ಲೇಖನ ಗಳಿಗಿಂತ ಇದು ಭಿನ್ನವಾಗಿರುತ್ತದೆ. ಕೆಲವು ವೇಳೆ ನಮ್ಮ ರಾಜಕಾರಣಿಗಳ ಹೇಳಿಕೆ ಗಳು ಮತ್ತು ನಡವಳಿಕೆಗಳು ತುಂಬಾ ಹಾಸ್ಯಾಸ್ಪದವಾಗಿರುತ್ತವೆ. ಇಂತಹವರ ಬಗ್ಗೆ ಲೇಖನಗಳು ನಮ್ಮನ್ನು ಆಳುವವರ ಸಣ್ಣತನವನ್ನು ಎತ್ತಿಹಿಡಿಯಬಲ್ಲವು.

ಅಪರಂಜಿಯ ಬೆಲೆಯನ್ನು 2 ರೂ. ಮಾಡಿ, ಚಿಲ್ಲರೆ ಅಭಾವವನ್ನು ಸ್ವಲ್ಪ ಕಡಿಮೆ ಮಾಡಬಹುದು. ಈಗ ಅಪರಂಜಿ ಕೇಳಿದ ಕೂಡಲೇ, ಅಂಗಡಿಯವ 50 ಪೈಸೆ ಕೊಡಿರೆಂದು ಹೇಳುತ್ತಾನೆ. ಈ ಹೆಚ್ಚಿನ ಹಣಕ್ಕೆ ತಕ್ಕಂತೆ ಅಪರಂಜಿ ಯನ್ನು ಉತ್ತಮ ಪಡಿಸಬಹುದು.

ಮುಕ್ಕ (ದ.ಕ.) ಎಲ್ಲಪ್ಪ



ಹಾಗಾದ್ರೆ ಮೂರೆಳೆ ಸರ ಈ ಸರ್ತಿ ಮಾಡಿಸ್ಕೋತೀನಿ ಅಂದ್ರೆ.

ಗೂಬೆ ಕೂರ್‍ಸೋದು

— ಆನಂದ್

ಭಾರತದ ಅಪ್ರತಿಮ ವೀರರು ಸೆಮಿ ಫೈನಲ್ಸ್‌ನಲ್ಲಿ ಸೋತದ್ದು ನಂಗೂ ಬೇಜಾರಾಯ್ತು. ಸ್ವಲ್ಪ ಹವಾ ಸೇವನೆ ಆದ್ರೂ ಮಾಡೋಣ ಅಂತ ಹೊರಟೆ.

ಮೊದಲು ಸಿಕ್ಕಿದ್ದು ಪಕ್ಕದ್ಮನೆ ನಾಣಿ. "ಆ ಮ್ಯಾನೇಜರ್ ಅಂತ ಇದಾನಲ್ಲ, ಅವಂದೇ ಕಣೋ ತಪ್ಪು! ಅಲ್ಲ, ಕಪಿಲ್‌ಗೆ ಸ್ವಲ್ಪ ಬುದ್ಧಿನಾರೂ ಹೇಳ್ಬಾರ್ದಾಗಿತ್ತೇ ?" ಅಂತ ಪರಿತಪಿಸಿದ.

ಅನಂತರ ಭೇಟಿಯಾದದ್ದು ರಾಜ. ಇಂಗು ತಿಂದ ಮಂಗನಂತೆ ಬಸ್ ಸ್ಟಾಪ್ ಬಳಿ ನಿಂತಿದ್ದ. "ಏನೋ ಮರಿ ?" ಅಂದೆ. "ಶ್ರೀಕಾಂತ್‌ನ ಟೀಮಿನಿಂದ ದಬ್ಬಬೇಕು ಕಣೋ, ಅಲ್ಲ ಅಷ್ಟು ಚೆನ್ನಾಗಿ ಆಡ್ತಿದ್ದೋನಿಗೆ ಯಾವ ಗ್ರಹ ಬಡೀತೋ ? ಅವನೊಬ್ಬ ಆಡಿ, ಇನ್ನೂ ಐವತ್ತು ಮಾಡಿದ್ರೆ ನಾವು ಜಂ ಅಂತ ಫೈನಲ್‌ನಲ್ಲಿ ಇರ್‍ತಾ ಇದ್ವಿ".

ಸ್ವಲ್ಪ ಮುಂದೆ ನಡೆದೆ. ನಂ ಮನೆ ಪುರೋಹಿತರು ಬರ್‍ತಾ ಇದ್ರು. ಅವರಿಗೆ ಮುಂಚಿನಿಂದ ಕ್ರಿಕೆಟ್ ಹುಚ್ಚು ! "ಏನು ಪಂಡಿತರೇ ?" ಅಂದೆ. ಖಿನ್ನ ಮುಖದಿಂದ ಹೇಳಿದರು, "ಎಲ್ಲಾ ದೈವೇಚ್ಛೆ !!"

ಚಿಲ್ಲರೆ ಅಂಗಡಿ ಹತ್ರ ರಾಮಿ ಸಿಕ್ದ. "ನೋಡೋ, ಆ ಕಪಿಲ್‌ದೇವ್‌ಗೆ ಯಾವ ನರಕ ಕಾದಿದೆಯೋ ? ಅಲ್ಲ, ಅಷ್ಟು ಜನಕ್ಕೆ ಮೋಸಮಾಡಿದಾನಲ್ಲ. ಆ ತರಹಾನೇ ಬೀಸೋದು ! ಎಲ್ಲಾ ನಮ್ಮ ಕರ್ಮ"

ರಸ್ತೆ ಕೊನೇಗೆ ನಂ ಬಡಾವಣೆಯ ಗಾವಸ್ಕರ್ (ನಂ ಟೀಮಿನ ಭಾರೀ ಬ್ಯಾಟ್ಸ್‌ಮನ್) ನಾಗರಾಜ ನಿಂತಿದ್ದ. ಅವನ ಕಣ್ಣಲ್ಲಿ ನೀರು ಬರೋದೊಂದು ಬಾಕಿ. "ಯಾರ್ದೋ ತಪ್ಪು ?" ಅಂದೆ. "ಎಲ್ಲಾ ನಂ ಪ್ರೇಕ್ಷಕರದ್ದೇ ತಪ್ಪು ! ನಾವು ಫೈನಲ್ ತಲಪ್ತೀವಿ ಅಂತ ಅಷ್ಟು ಉತ್ಸಾಹ ಇರಬಾರ್‍ದಾಗಿತ್ತು ! ಅದರಿಂದ ಕಪಿಲ್ಸ್ ಡೆವಿಲ್ಸ್‌ಗೆ ಭಾರಿ ಪ್ರೆಷರ್ ಆಗಿ ಸೋತೆವು !" ಅವನ ಸೈಕಾಲಜಿ ಕೇಳಿ ಅವಾಕ್ಕಾದೆ !

ಕೊನೆಗೆ ಕೇಶವ್ ಸಿಕ್ಕಿದ. ಅವನೂ, ಅವನ ಹೆಂಡತಿ ಉಮಾನೂ ಬರ್‍ತಾ ಇದ್ರು. "ಏನು ಕೇಶವ, ರಿಲಯೆನ್ಸ್ ಬಗ್ಗೆ ಏನಂತೀಯಾ ?" ಅಂದೆ. ಇಬ್ಬರೂ ಕೇಳಿದರು "ಯಾವ ರಿಲಯೆನ್ಸ್ ಕಪ್ಪು ?" ಅವರಿಬ್ಬರಿಗೂ ಮದುವೆ ಆದ್ದು ಹೋದ ವಾರ ಅಂತ ನೆನಪಾಯ್ತು !!

ನೀನ್ ಯಾರ ಮೇಲೆ ಗೂಬೆ ಕೂರಿಸ್ತೀಯಾ ಅಂತ ಕೇಳಿದ್ರಾ ? ನಾನು ಅಪರಂಜಿ ಬಾತ್ಮೀದಾರ ಅಷ್ಟೇ ! ಆದರೆ ಒಂದು ವಿಷಯ ಯಾರಿಗೂ ತಿಳೀದೇ ಇರೋದು ನನ್ನ ಗಮನಕ್ಕೆ ಬಂದಿದೆ ! ಸೆಮಿ ಫೈನಲ್ ದಿನ ಕಪಿಲ್ ಎದ್ದು, ಹೋಟೆಲ್ ಕಿಟಕೀಲಿ ನೋಡಿದನಂತೆ ! ಮರದ ಮೇಲೆ ಒಂದು ಗೂಬೆ ಕೂತಿದ್ದು ಅವನಿಗೆ ಕಂಡುಬಿಡ್ತು ! ಆತನ ಗ್ರಹಚಾರ, ಅದೇ ಅಪ ಶಕುನ ಆಯ್ತು !!

ದೂರ್ವಾಸ ಮುನಿಗಳು ಆಶ್ರಮದಲ್ಲಿ ಕೂಗಾಡುತ್ತಿದ್ದರು. ಒಬೊಬ್ಬ ಶಿಷ್ಯ ರನ್ನೂ ಕರೆದು "ಅಗ್ನಿ ಕುಂಡವನ್ನು ಹೀಗೆನೋಡಿ ಕೊಳ್ಳೋದು ? ಸಮಿತ್ತುಗಳನ್ನು ಹೀಗೆ ಸಿದ್ಧಪಡಿಸೋದು ? ಧರ್ಭೆ ಕಟ್ಟೋದು ಹೀಗೇನೇ ?" ಎಂದೆಲ್ಲಾ ರೇಗುತ್ತಾ ಕೇಳಿ, ಬಯ್ಯುತ್ತಿದ್ದರು. ಒಂದು ದಿನ ಕೌಂಡಿನ್ಯರು ಇದನ್ನು ನೋಡಿದರು.

"ದೂರ್ವಾಸ, ಹೀಗೆ ರೇಗಿ ಕೂಗಾಡಿದರೆ, ರಕ್ತದ ಒತ್ತಡ ಹೆಚ್ಚಾಗಿ ಲಕ್ವ ಹೋಡೀಬಹುದು ಹುಷಾರಾಗಿರಪ್ಪ" ಎಂದರು.

"ಲಕ್ವ ಹೊಡೀದೇ ಇರಲಿ ಎಂದೇ ಹೀಗೆ ರೇಗಾಡ್ತೀನಿ. ನನ್ನ ಶಿಷ್ಯರಿಗೆ ರಕ್ತದ ಒತ್ತಡ ಬಂದರೂ ಬರಬಹುದು. ಅವರಿಗೆ ಉಪದೇಶಮಾಡಿ" ಅಂದರಂತೆ ದೂರ್ವಾಸರು.

ಥಳಕು–ತುಣಕು

ಸಂಕರ ಸಂಪರ್ಕ

— ಕಮಲಾ ರಾಮಸ್ವಾಮಿ

"ಟ್ರಿಂಗ್ ಟ್ರಿಂಗ್..." ಥೂ, ಹಾಳಾದ್ದು. ಸರಿಯಾದ ಮುಹೂರ್ತಕ್ಕೇ ಬೆಲ್ಲಾಗುತ್ತೆ. ಹಾಲು ಉಕ್ಕಬೇಕು, ಒಗ್ಗರಣೆ ಸೀಯಬೇಕು... gas ಆರ್ಸಿ ಓಡಿಬಂದೆ. ಕೈ ಒರ್ಸಿಕೊಂಡು ರಿಸೀವರ್ ಎತ್ತಿದೆ. ನೀರವ... ನಿಶ್ಶಬ್ದ. Line dead! ಇಟ್ಟರೆ ತಕ್ಷಣ ರಿಂಗಾಗುತ್ತೆ. ಏನು ಮಾಡಲಿ ಎನ್ನುವಷ್ಟರಲ್ಲಿ ಇದ್ದಕ್ಕಿದ್ದ ಹಾಗೆ line ಜೀವಂತವಾಯಿತು. ಎರಡು ಹೆಣ್ಣು ಧ್ವನಿಗಳ ಸ್ವಾರಸ್ಯ ಸಂಭಾಷಣೆ ಕಿವಿಗೆ ಬಿತ್ತು.

"ಹಲೋ, ನೀರಜಾನಾ ಮಾತಾಡ್ತಾ ಇರೋದು ?"

"ಹೌದು. ಶೀಲೂ ಅಲ್ವಾ ? ಏನ್ ಸಮಾಚಾರ ?"

"ಎಷ್ಟು ಗಂಟೇಗೆ ಬರ್ತೀಯೂ ?"

"ಎಲ್ಲೀಗೆ ? ನಿಮ್ಮನೇಗಾ ?"

"ಅಲ್ಲಾ ಕಣೆ, ಆ ವೃದ್ಧಾಶ್ರಮದಲ್ಲಿ ಇಟ್ಕೊಂಡಿರೋ functionಗೆ. ಅವತ್ತೇ decide ಮಾಡಿದ್ವಲ್ಲಾ ಇಬ್ರೂ ಹೋಗೋದು ಅಂತ. ನಿಂಗೆ invitation ಬಂದಿಲ್ವಾ ?"

"ಬಂದಿರ್ಬೇಕು. ನೆನ್ನೆ ಭಾಳ ಬಿಜಿಯಾಗಿದ್ದೆ. Post ನೋಡ್ಲೇ ಇಲ್ಲ. ಅದ್ಸರಿ, ಪ್ರೆಸಿಡೆಂಟ್ ಯಾರಾದ್ರು ಕಣೇಗೆ ?"

"ಅಪ್ರೇ ಮಾಲಿನಿ ತಾಯಿ. ಭಾಳ ಚೆನ್ನಾಗಿ ಮಾತಾಡ್ತಾರಂತೆ"

"ಓ ಆಮೇಲೆ ಭಾಷಣ ಬಿಗಿಯೋರು ಯಾರು ಯಾರು ?"

"ನಾಲ್ಕು ಜನ ಅಷ್ಟೇ ಕಣೆ! ಎಲ್ರಿಗೂ ಹದಿನೈದು ನಿಮಿಷ ಮಾತ್ರ time ಕೊಟ್ಟಿರೋದು. ಆಮೇಲೆ ಅಧ್ಯಕ್ಷ ಭಾಷಣ, tea, ವಂದನಾರ್ಪಣೆ, cultural programme"

"ನೀನೂ ಭಾಷಣ ಮಾಡ್ತಾ ಇದ್ದೀಯಾ ?"

"ಅಯ್ಯೋ ! ಎಷ್ಟೋ ಹೇಳ್ದೆ ಆಗುಲ್ಲಾಂತ ! ಕೇಳಲಿಲ್ಲ. ಎಲ್ರೂ ಹೀಗೇ ಅಂದ್ರೆ ಮಾತಾಡೋದು ಯಾರು ಅಂದ್ರು. ನಂಗೋ ಪುರಸೊತ್ತೇ ಇಲ್ಲ. Social workಉ, ಮನೆಗೆಲ್ಸ—ಸಾಕಾಗಿದೆ. ಇಪತ್ತು ಅಡಿಗೆಯೋಳು ಚಕ್ಕರ್, ಕೆಲ್ಸದವಳು ನಾಲ್ಕು ದಿನದಿಂದ ನಾಪತ್ತೆ..."

"ನಿಮತ್ತೇಗೆ ಹ್ಯಾಗಿದೆ ಈಗ ?"

"Strokeಉ ಕಣೇ. ಇನ್ನೆಂತ ಹುಷಾರು. ಇವ್ರು ಬೇರೆ tour ಗೆ ಹೋಗ್ಬೇಕು. ನೋಡ್ಕೋಳ್ಳೋದು ಕಷ್ಟಾಂತ ವೃದ್ಧಾಶ್ರಮಕ್ಕೆ 1stಗೇ ಸೇರ್ಸಿಬಿಟ್ಟೆ"

"ನಿಂದಲ್ದೆ ಇನ್ಯಾರ ಯಾರ ಭಾಷಣ ಇದೆಯೆ ?"

"ಮನೋರಮಾ ಸುಬ್ಬಯ್ಯ. ಈಗ ಮನೋರಮಾ ದೇವಿ"

"ಆಲಿಮೋನಿ ಬಂತೇನೆ ?"

"ಹೂಂ. ಎಲ್ಲಾ settle ಆಯ್ತು ಮಕ್ಳು ತಂದೆಯ careಗೇ ಅಂತೆ"

"ಇನ್ನಿಬ್ರು ಯಾರು ?"

"ಸೀತಾ ರಾಮಮೂರ್ತಿ, ಪುಷ್ಪಾ ರಾಜನ್"

"ಸೀತಾಳ ಗಂಡನ್ನ ಆಸ್ಪತ್ರೆಗೆ ಸೇರ್ಸಿದ್ದಾರೆ ಅಂದ್ಲಲ್ಲಾ ಗಿರಿಜು"

"ಹೌದು ಕಣೆ. ನಿಂಗೊತ್ತಿಲ್ವಾ ? ಸೀತಾ ಏನೋ ತುಂಬಾ ಬಿಜಿ ಆಗಿದ್ಳಂತೆ. ಆತ ಕತ್ತರಿ ಕೇಳಿದ್ರಂತೆ. ಇವ್ಳು ಎಸ್ದಾಗ ಹೊಟ್ಟೆಗೆ ಚುಚ್ಚಿಕೊಂಡು ಗಾಯ ಆಗಿ ಆಸ್ಪತ್ರೇಲಿ ಇದ್ದಾರೆ. Sugar ಬೇರೆ. Heal ಆಗಿಲ್ಲ. ಸರ್‍ಯಾಗಿ ಒಂದು catch ಹಿಡಿಯುಕ್ಕೆ ಬರ್‍ದ ಪ್ರಾಣಿ"

"ಅಯ್ಯೋ ಪಾಪ ! ಅದ್ಸರಿ. ಭಾಷಣದ ವಿಷಯ— subject —ಏನೇ"

"ಗೃಹ ಶಾಂತಿಗೆ ಗೃಹಿಣಿ ಜವಾಬ್ದಾರಿಣಿ"

ಟರ್ ಎಂದು connection cut ಆಯ್ತು.

oOo

ಆದರ್ಶವಾದಿ ಗೋಪಣ್ಣ !

—ಜಿ. ರಾಮಣ್ಣ ಆಲೆಟ್ಟಿ

ಗೋಪಣ್ಣ ತಾನು ಗಾಂಧಿವಾದಿ ಎಂದು ಹೇಳಿಕೊಳ್ಳುತ್ತಿದ್ದ. ಅದನ್ನು ಅನ್ಯರಿಗೆ ತೋರಿಸಿಕೊಳ್ಳಲೋ ಎಂಬಂತೆ ಖಾದಿ ಪಂಚೆ ಹಾಗೂ ಖಾದಿ ಜುಬ್ಬವನ್ನು ಧರಿಸುತ್ತಿದ್ದ. ಆದುದರಿಂದಲೇ ಅವನ ಹಳ್ಳಿಯವರೆಲ್ಲಾ ಅವನನ್ನು "ಗಾಂಧಿ ಗೋಪಣ್ಣ" ಎಂದು ಕರೆಯುತ್ತಿದ್ದರು.


ಒಂದು ದಿನ ಗೋಪಣ್ಣನೊಡನೆ ಮಾತನಾಡುತ್ತಿರುವಾಗ "ಮಹಾತ್ಮರ ಆದರ್ಶಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿ ಯಶಸ್ಸುಗಳಿಸಬೇಕು" ಎಂದು ಹೇಳಿದ. ಅವನನ್ನು ನಾನು ಹತ್ತಿರದಿಂದ ಬಲ್ಲವನಾದುದರಿಂದ ಅವನ ವೈಯಕ್ತಿಕ ಜೀವನವನ್ನು ಠೀಕಿಸಬೇಕೆಂದು ಮನಸ್ಸಿನಲ್ಲಿಯೇ ಅಂದುಕೊಂಡೆ. "ಅದು ಸರಿ ಗೋಪಣ್ಣ, ಇಷ್ಟೊಂದು ಆದರ್ಶವಾದಿಯಾದ ನೀನು ನಿನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಏಕಾಂಗಿಯಾಗಿ ಏಕಿರುವೆ ?" ಎಂದು ಕೇಳಿದೆ. "ನೋಡಿ ಸಾರ್, ಗೌತಮನು ಹೆಂಡತಿ ಮಕ್ಕಳನ್ನು ಬಿಟ್ಟು ಏಕಾಂಗಿಯಾಗಿ ತಪಸ್ಸು ಮಾಡಿದ ಮೇಲೆ ತಾನೇ ಜ್ಞಾನೋದಯವಾಗಿ ಗೌತಮ ಬುದ್ಧನಾದದ್ದು. ಅದರಂತೆ ನನ್ನ ಆದರ್ಶಗಳನ್ನು ಪಾಲಿಸಿ ಜನರಿಗೆ ಅದನ್ನು ಬೋಧಿಸಬೇಕಾದರೆ ನಾನು ಏಕಾಂಗಿಯಾಗಿರಬೇಕು. ಇದು ಬುದ್ಧ ದೇವನ ಆದರ್ಶ" ಎಂದು ಹೇಳಿದ.

"ಅದು ಹೋಗಲಿ. ಇತ್ತೀಚೆಗೆ ನಿಮ್ಮ ಮನೆಯ ಸಮೀಪದ ಒಂದು ಗಲಾಟೆಯಲ್ಲಿ ಪಕ್ಕದ ಮನೆಯವನಿಗೆ ನೀನು ಹೊಡೆದೆಯಂತೆ. ಅದು ಯಾಕೆ ?" "ಸಾರ್ ನಮ್ಮ ನೆರೆಕರೆಯವರು ನೀರಿಗೋಸ್ಕರ ಜಗಳವಾಡುತ್ತಿದ್ದರು. ಆಗ ರಾತ್ರಿ ಹನ್ನೊಂದು ಗಂಟೆ ಸಮಯವಾದುದರಿಂದ ನಾನು ಹೋಗಿ ಬೇರೆಯವರಿಗೆ ನಿದ್ರಾ ಭಂಗವಾಗುತ್ತಿದೆ, ಜಗಳವಾಡಬೇಡಿರೆಂದು ಹಿತ ನುಡಿದಾಗ ನನ್ನ ಮಾತಿನಿಂದ ಕೋಪಗೊಂಡ ವೆಂಕಪ್ಪ ನನಗೆ ಹೊಡೆದ. ನಾನು ಸಿಟ್ಟು ತಾಳಲಾರದೆ ಸರಿಯಾಗಿ ನಾಲ್ಕೇಟು ಕೊಟ್ಟೆ ! ಪ್ರೀತಿಗೆ ಪ್ರೀತಿ, ರೋಷಕ್ಕೆ ರೋಷ, ಏಟಿಗೆ ಏಟು ಇದು ಸುಭಾಷ್‌ಚಂದ್ರರ ಆದರ್ಶ" ಎಂದು ನನ್ನ ಬಾಯಿ ಮುಚ್ಚಿದ.


"ಹಾಗಿದ್ದರೆ ನಿನ್ನ ವಠಾರದಲ್ಲಿಯೇ ಇರುವ ದೇವಪ್ಪ ಮತ್ತು ವೆಂಕಪ್ಪರನ್ನು ಎತ್ತಿಕಟ್ಟಿ ಅವರಿಬ್ಬರೂ ಕೋರ್ಟಿಗೆ ಹೋಗುವಂತೆ ಯಾಕೆ ಮಾಡಿದೆ ?" "ಅದೊಂದು ನ್ಯಾಯ ಸಮ್ಮತ ವಾದ ಪ್ರ್ಯಾಜ್ಯ ಸಾರ್. ದೇವಪ್ಪನಿಗೂ ವೆಂಕಪ್ಪನ ಹೆಂಡತಿಗೂ ಅನೈತಿಕ ವ್ಯವಹಾರವಿತ್ತು. ಇಂದಲ್ಲ ನಾಳೆ ಈ ವಿಷಯ ಬಹಿರಂಗವಾಗಿ ಅವರಿ

ಬ್ಬರೂ ಹೊಡೆದಾಡಿ ಸಾಯುವುದನ್ನು ತಪ್ಪಿಸಲು ಬೇರೆ ಯಾವುದೋ ವಿಷಯವನ್ನು ನೆಪ ಮಾಡಬೇಕಾಯಿತು. ಇದು ಅವರ ಕ್ಷೇಮಕ್ಕೋಸ್ಕರವಲ್ಲದ ಬೇರೇನೂ ಅಲ್ಲ. ಶ್ರೀರಾಮಚಂದ್ರ ಮರದ ಮರೆಯಾಗಿ ನಿಂತು ವಾಲಿಯನ್ನು ಸಂಹರಿಸಿಲ್ಲವೇ ? ಅದರಂತೆ ಇದು ಶ್ರೀರಾಮನ ಆದರ್ಶ".

ಮಹಾತ್ಮರ ಆದರ್ಶಗಳನ್ನು ಗೋಪಣ್ಣ ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವ ರೀತಿಯನ್ನು ಯೋಚಿಸುತ್ತಾ ಮನೆ ಕಡೆ ನಡೆದ.



ಶಾಂತಿ ಪಡೆ ಕೊಲ್ತಾ ಇರೋದು ನೋಡಿದ್ರೆ "ಸ್ಮಶಾನ ಶಾಂತಿ ಪಡೆ"
ಅಂತ ಕರೀಬೋದಲ್ವೆ ?



REGISTERED No. BGW-180